# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 131 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 22.11.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 131 • PRGI No:KARKAN/2023/88055 • VIJAYANAGARA • 22.11.2024 • Friday • Page:04 • Rs:2










**ಮೈಕ್ರೋ ನ್ಯೂಸ್**

## ಇಂದು ರಾಷ್ಟ್ರೀಯ ಅಪಸ್ಮಾರ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಮೆದುಳು ಉಪಕ್ರಮ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಅಪಸ್ಮಾರ ದಿನಾಚರಣೆ ಕಾರ್ಯಕ್ರಮ ನವಂಬರ್ 22 ರಂದು ಬೆಳಗ್ಗೆ 10 ಗಂಟೆಗೆ ಹೊಸಪೇಟೆಯ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಡಿಎಚ್‌ಓ ಡಾ.ಶಂಕರ್ ನಾಯ್ಕ್.ಎಲ್ ಅವರು ಕಾರ್ಯಕ್ರಮ ಉದ್ಘಾಟನೆ ಮಾಡುವರು. ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈಧ್ಯಾಧಿಕಾರಿ ಡಾ.ಹರಿಪ್ರಸಾದ್ ಅವರು ಅಧ್ಯಕ್ಷತೆ ವಹಿಸುವರು. ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿ ಉಪಸ್ಥಿತರಿರಲಿದ್ದಾರೆ.

## ಬಳ್ಳಾರಿ ಮತ ಎಣಿಕೆ ಕೇಂದ್ರಕ್ಕೆ ಚುನಾವಣಾಧಿಕಾರಿ ರಾಜೇಶ್ ಭೇಟಿ

**ಹಂಪಿ ಟೈಮ್ಸ್ ಬಳ್ಳಾರಿ**

ಸಂಡೂರು ವಿಧಾನಸಭೆ ಉಪಚುನಾವಣೆ ಸಂಬಂಧ ಮತಗಳ ಎಣಿಕೆ ಕಾರ್ಯ ನ.23 ರಂದು ಬೆಳಿಗ್ಗೆ 08 ಗಂಟೆಯಿಂದ ಬಳ್ಳಾರಿ ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಜರುಗಲಿದ್ದು, ಸಂಡೂರು ವಿಧಾನಸಭೆ ಉಪಚುನಾವಣೆಯ ಚುನಾವಣಾಧಿಕಾರಿ ರಾಜೇಶ್.ಹೆಚ್.ಡಿ ಅವರು ಮತ ಎಣಿಕಾ ಕೇಂದ್ರಕ್ಕೆ ಭೇಟಿ ನೀಡಿ, ಸಿದ್ಧತೆಗಳ ಕುರಿತು ಪರಿಶೀಲನೆ ನಡೆಸಿದರು.

ನ.23 ರಂದು ಬೆಳಿಗ್ಗೆ 08 ಗಂಟೆಗೆ ಮತ ಎಣಿಕಾ ಕಾರ್ಯ ಪ್ರಾರಂಭವಾಗಲಿದೆ. ಅದಕ್ಕೂ ಮುನ್ನ ಸ್ಟ್ರಾಂಗ್ ರೂಂ ಗಳನ್ನು ತೆರೆಯುವುದು, ಪೋಸ್ಟಲ್ ಬ್ಯಾಲೆಟ್‌ಗಳ ಎಣಿಕೆಗೆ ಸಿದ್ಧ ಮಾಡಿಕೊಳ್ಳುವುದು, ಮತ ಎಣಿಕಾ ಕಾರ್ಯ ನೆರವೇರಿಸುವ ಅಧಿಕಾರಿ, ಸಿಬ್ಬಂದಿಗಳು, ಮಾಧ್ಯಮದವರು ಮತ್ತು ಏಜೆಂಟರುಗಳ ಮತ ಎಣಿಕಾ ಕೇಂದ್ರಕ್ಕೆ ಪ್ರವೇಶ ಕಲ್ಪಿಸಲು ಕೈಗೊಂಡಿರುವ ಸಿದ್ಧತೆಗಳ ಬಗ್ಗೆ ಪರಿಶೀಲಿಸಿದರು.

### ತಂಬಾಕು ಮುಕ್ತ ಯುವ ಅಭಿಯಾನದಲ್ಲಿ ಸಹಾಯಕ ಆಯುಕ್ತ ಪಿ.ವಿವೇಕಾನಂದ ಹೇಳಿಕೆ

# ಜೀವನಾನಂದಕ್ಕಾಗಿ ತಂಬಾಕು ತ್ಯಜಿಸಿ




**ಹಂಪಿ ಟೈಮ್ಸ್ ಹೊಸಪೇಟೆ**

ವಿದ್ಯಾರ್ಥಿ ಜೀವನದಲ್ಲಿ ತಂಬಾಕು ಅತ್ಯಂತ ಮಾರಕ ವಸ್ತು, ವಿದ್ಯಾರ್ಥಿಗಳ ಆತ್ಮವಿಶ್ವಾಸ ಮತ್ತು ಆರೋಗ್ಯ ಕಸಿಯುವ ಶತ್ರುವಿದ್ದಂತೆ ಎಂದು ಹೊಸಪೇಟೆಯ ಸಹಾಯಕ ಆಯುಕ್ತ ಪಿ.ವಿವೇಕಾನಂದ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ನಗರದ ಮಹಿಳಾ ಸಮಾಜ, ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಗುರುವಾರ ನಡೆದ ತಂಬಾಕು ಮುಕ್ತ ಅಭಿಯಾನ ಜಾಗೃತಿ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದರು.

ತಂಬಾಕು ಸೇವನೆಯು ಯುವ ಜನರ ಮೇಲೆ ಬಹುಮುಖಿ ಪ್ರಭಾವವನ್ನು ಬೀರುತ್ತದೆ. ಇದರಲ್ಲಿ ದೈಹಿಕ, ಮಾನಸಿಕ ಆರೋಗ್ಯ ಮತ್ತು ಸಮಾಜ ಹಾಗೂ ಪರಿಸರದ ಮೇಲೆ ಋಣಾತ್ಮಕ ಪ್ರಭಾವ ಬೀರುತ್ತದೆ. ವಿದ್ಯಾರ್ಥಿಗಳಲ್ಲಿ ಓದುವ ಆಸಕ್ತಿ ಕಡಿಮೆಯಾಗುತ್ತದೆ. ಯುವಕರು ತಂಬಾಕು ಸೇವನೆಯಿಂದ ದೂರವಿದ್ದರೆ, ಅವರು ತಮ್ಮ ಶಿಕ್ಷಣ ಮತ್ತು ವೃತ್ತಿ ಜೀವನದ ಮೇಲೆ ಹೆಚ್ಚಿನ ಗಮನ ಹರಿಸಬಹುದು. ಆಲಸ್ಯ ಮತ್ತು ಒತ್ತಡವನ್ನು ತಪ್ಪಿಸುವ ಮೂಲಕ ಅವರ ಕಾರ್ಯಕ್ಷಮತೆ ಹೆಚ್ಚಿಸಬಹುದು ಎಂದು ತಿಳಿಸಿದರು.


ಜಿಲ್ಲಾ ಆರ್ ಸಿ ಹೆಚ್ ಅಧಿಕಾರಿ ಡಾ. ಜಂಬಯ್ಯ ಮಾತನಾಡಿ, ಆರೋಗ್ಯ ಇಲಾಖೆಯಿಂದ 60 ದಿನಗಳ ಕಾಲ ತಂಬಾಕು ಮುಕ್ತ ಯುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇಲ್ಲಿಯವರೆಗೆ ಜಿಲ್ಲೆಯ 160 ಶಾಲಾ ಕಾಲೇಜುಗಳಲ್ಲಿ ಈ ಅಭಿಯಾನ ನಡೆಸಲಾಗಿದೆ. ಮುಂಬರುವ ದಿನಗಳಲ್ಲಿ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯತಿಗಳಲ್ಲಿ ತಂಬಾಕು ಮುಕ್ತ ಗ್ರಾಮ ಅಭಿಯಾನವನ್ನು ಹಮ್ಮಿಕೊಳ್ಳಲಾಗುವುದು ಎಂದರು.



ತಂಬಾಕು 5 ಸಾವಿರ ಹಾನಿಕಾರಕ ರಾಸಾಯನಿಕ ಅಂಶಗಳನ್ನು ಒಳಗೊಂಡಿರುತ್ತದೆ. ಕರ್ನಾಟಕದಲ್ಲಿ ಶೇ.22.8 ಜನ ತಂಬಾಕು ಸೇವನೆ ಮಾಡುತ್ತಾರೆ. ಕ್ಯಾನ್ಸರ್ ರೋಗಿಗಳಲ್ಲಿ ಶೇ.25 ರಷ್ಟು ತಂಬಾಕಿನಿಂದ ಕ್ಯಾನ್ಸರ್ ಗೆ ಒಳಗಾಗುತ್ತಾರೆ. ಆದ್ದರಿಂದ ಮಕ್ಕಳು ತಂಬಾಕಿನಿಂದ ದೂರವಿರ ಬೇಕು ಎಂದು ಮಕ್ಕಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ನಾಗರಾಜ ಹವಾಲ್ದಾರ್, ಶಾಲೆಯ ಮುಖೋಪಾಧ್ಯಯರಾದ ಆರ್.ರಮಾ. ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ರಾಧಿಕಾ.ಕೆ, ತಾಲೂಕು ಆರೋಗ್ಯ ಅಧಿಕಾರಿ ಡಾ. ಬಸವರಾಜ.ಸಿ, ಮತ್ತು ಆರೋಗ್ಯ ಇಲಾಖೆಯ ಎಂ.ಪಿ.ದೊಡ್ಡಮನಿ, ಎಂ.ಧರ್ಮನಗೌಡ ಸೇರಿದಂತೆ ಅಧಿಕಾರಿಗಳು ಹಾಗೂ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

**ಆನಂದ ಬಾಣ**




## ನಕಲು ಫಾರಂ–3 ಸೃಷ್ಟಿ, ನಗರಸಭೆ ನೌಕರರ ವಿರುದ್ಧ ಎಫ್‌ಐಆರ್

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರಸಭೆಯ 29ನೇ ವಾರ್ಡ್ ಮೃತ್ಯುಂಜಯನಗರದಲ್ಲಿನ ಆಸ್ತಿಯೊಂದಕ್ಕೆ ಸಂಬಂಧಿಸಿದಂತೆ ಖೊಟ್ಟಿ ದಾಖಲೆ ಸೃಷ್ಟಿ, ಪಿ.ಐ.ಡಿ.ಖಾತೆ ಸಂಖ್ಯೆ ನಕಲು ಮಾಡಿ ಫಾರಂ.ನಂ–3 ದಾಖಲೆ ಸೃಷ್ಟಿಸಿ ಅಕ್ರಮ ಆಸ್ತಿ ಮಾರಟ ಮಾಡಲು ಶಾಮೀಲಾಗಿದ್ದಾರೆಂದು ಆರೋಪಿಸಿ ಹೊಸಪೇಟೆ ನಗರಸಭೆ ನೌಕರರಾದ ಕಂದಾಯ ನಿರೀಕ್ಷಕರಾದ ಮಾಂತೇಶ ಪಾಟೀಲ್, ರಾಮಪ್ಪ, ಬಿಲ್ ಕಲೆಕ್ಟರ್ ಜಯಪ್ರಕಾಶ ಹಾಗೂ ಕಂದಾಯ ಅಧಿಕಾರಿ ರಮೇಶ ಇವರುಗಳ ವಿರುಧ್ದ ನಗರಠಾಣೆಯಲ್ಲಿ ಪೌರಾಯುಕ್ತ ಚಂದ್ರಪ್ಪ ಬುಧವಾರ ದೂರು ನೀಡಿ ಎಫ್‌ಐಆರ್ ದಾಖಲಿಸಿದ್ದಾರೆ. ಕೆ.ಸಿ.ಎಸ್. ಆರ್. ನಿಯಮಾವಳಿ ಪ್ರಕಾರ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.



**ದೂರಲ್ಲಿ ಏನಿದೆ:** ಎಂಜೆನಗರದಲ್ಲಿ ಶ್ರೀಮತಿ ಪುಷ್ಪಾ ಕೊಂಡಯ್ಯ ಗಂಡ ಕೊಂಡಯ್ಯರವರ ಹೆಸರಿನಲ್ಲಿರುವ ಅಸೆಸ್‌ಮೆಂಟ್ ನಂಬರ್ 17269/ಬಿ. ಪ್ಲಾಟ್ ನಂಬರ್ 29ರ ಆಸ್ತಿ, ಉ–ದ: 60 ಅಡಿ, ಪೂ–ಪ:40 ಅಡಿ ಒಟ್ಟು 2400 ಚ.ಅಡಿ. ವಿಸ್ತೀರ್ಣ ಜಾಗವಿದ್ದು, ಈ ಜಾಗವನ್ನು ಶೋಭಾ ಕೊಂಡಯ್ಯರವರು ಪವರ್ ಆಫ್ ಅಟಾರ್ನಿಯನ್ನು ಎನ್.ಮಲ್ಲಿಕಾರ್ಜುನಗೆ ನಿಡಿ, ಎನ್. ಮಲ್ಲಿಕಾರ್ಜುನ ಅವರಿಂದ ಬೆಂಗಳೂರಿನ ಯಲಹಂಕದ ಉಪನೋಂದಣಾಧಿಕಾರಿ ಕಛೇರಿಯಲ್ಲಿ ಪ್ರಶಾಂತ್ ಕುಮಾರ್ ಎಚ್. ಮತ್ತು ಸತೀರ್ಶ ಹೆಚ್. ಎಸ್. ಅವರಿಗೆ ಮಾರಾಟ ಮಾಡಿ, ನಂತರ ಹೊಸಪೇಟೆ ನಗರಸಭಾ ಕಛೇರಿಯಲ್ಲಿ ಎ.19, 2023 ರಂದು ಖಾತಾ ಬದಲಾವಣೆಗಾಗಿ ಅರ್ಜಿ ನೀಡಿದ್ದಾರೆ. ನಗರಸಭೆ ಸಿಬ್ಬಂದಿ ಅವರೊಂದಿಗೆ ಶಾಮೀಲಾಗಿ ಮೇಲ್ಕಂಡ ಅಸೆಸ್‌ಮೆಂಟ್ ನಂಬರಿನ ಚೆಕ್ಕುಬಂದಿ, ಫೋಟೋವನ್ನು ತೋರಿಸಿ, ನಕಲಿ ಸ್ವತ್ತಿನ ಸಂಖ್ಯೆಯನ್ನು ನೀಡಿ ಮೋಸ ಮಾಡುವ ಉದ್ದೇಶದಿಂದ ಖೋಟ್ಟಿ ದಾಖಲೆ ಸೃಷ್ಟಿಸಿದ್ದು, ಆರೋಪಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ದೂರು ದಾಖಲಿಸಿದ್ದಾರೆ. ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಪರಿಶಿಷ್ಟ ಪಂಗಡದ 100 ಸಂಶೋಧನಾ ವಿದ್ಯಾರ್ಥಿಗಳಿಂದ ಮಾಸಿಕ 25 ಸಾವಿರ ರೂ ಶಿಷ್ಯವೇತನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್ ಡಾಕ್ಟರಲ್ ಫೆಲೋಶಿಪ್ ಮಾಡುತ್ತಿರುವ ಪರಿಶಿಷ್ಟ ಪಂಗಡದ 100 ಸಂಶೋಧನಾ ವಿದ್ಯಾರ್ಥಿಗಳಿಗೆ ಯಾವುದೇ ಫೆಲೋಶಿಪ್ ಪಡೆಯದಿದ್ದಲ್ಲಿ ಮಾಸಿಕ 25 ಸಾವಿರ ಶಿಷ್ಯವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳು ಡಿಸೆಂಬರ್ 14ರ ಒಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ಶಿಷ್ಯವೇತನಕ್ಕಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಹ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ವಿಜಯನಗರ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಹಾಗೂ ಹೊಸಪೇಟೆ, ಹರಪನಹಳ್ಳಿ, ಕೂಡ್ಲಿಗಿಯ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ ಮತ್ತು ಹೂವಿನಹಡಗಲಿ, ಹಗರಿಬೊಮ್ಮನಹಳ್ಳಿ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಅರ್ಜಿ ನಮೂನೆ ಪಡೆದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಮ್ಮ ಧ್ವನಿನೂ ಸ್ವಲ್ಪ ಕೇಳಿಸಿಕೊಳ್ಳಿಸ್ವಾಮಿ

### ಗಡಿಗ್ರಾಮಗಳ ಜನರ ಸಮಸ್ಯೆಗೆ ಕಿವಿಗೊಡೊರು ಇಲ್ಲವೇ? ಸಾರಿಗೆ ಸೌಲಭ್ಯ ಕಲ್ಪಿಸಲು ವಿದ್ಯಾರ್ಥಿಗಳ ಆಗ್ರಹ

**ಮಾರೇಶ ತಿಪ್ಪೇಹಳ್ಳಿ ಕೂಡ್ಲಿಗಿ**

ನಮ್ಮ ಧ್ವನಿನೂ ಸ್ವಲ್ಪ ಕೇಳ್ರಿಸ್ವಾಮಿ, ದಿನವೂ ನಾವು ಬಸ್‌ಗಾಗಿ ಕಾಯಬೇಕು, ಸರ್ಕಾರಿ ಬಸ್‌ಗಳು ಬಾರದ್ದಕ್ಕೆ ಆಟೋ, ಟ್ರ್ಯಾಕ್ಟರ್, ಬಂಡಿಗಳನ್ನು ಕಾದು, ಬೇಡಿಕೊಂಡು ದೂರದ ಶಾಲೆಗೆ ಹೋಗುವಷ್ಟರಲ್ಲಿ ತರಗತಿಗಳು ಆರಂಭವಾಗಿರುತ್ತವೆ. ಸರಿಯಾಗಿ ಪಾಠ ಆಳಿಸಲು ಆಗುತ್ತಿಲ್ಲ. ಶಾಲೆಯಿಂದ ಮನೆಗೆ ಬರೋದು ಸೋರ್ಯಾಸ್ತವಾದ ನಂತರವೆ. ಸರಿಯಾಗಿ ಪಾಠನೇ ಕೇಳದಿದ್ದರೆ, ಓದಿಕೊಳ್ಳಲು ಸಮಯ ಸಿಗದಿದ್ದರೆ ಚೆನ್ನಾಗಿ ಪರೀಕ್ಷೆ ಬರೆಯೋದು ಹೇಗೆ? ಉತ್ತಮ ಅಂಕ ಗಳಿಸಿ ಕೀರ್ತಿ ತರಬೇಕು ಎಂದು ಬುದ್ಧಿ ಹೇಳುವ ಹಿರಿಯ ಅಧಿಕಾರಿಗಳು ನಮ್ಮ ಸಮಸ್ಯೆಗೆ ಪರಿಹಾರ ಕಲ್ಪಿಸಿ, ಗ್ರಾಮೀಣ ವಿದ್ಯಾರ್ಥಿಗಳ ಉನ್ನತ ಶೈಕ್ಷಣಿಕ ಕನಸನ್ನ ನನಸಾಗಿಸಿಕೊಳ್ಳಲು ಕನಿಷ್ಟ ಶಾಲಾ ಸಮಯಕ್ಕೆ ಸರಿಯಾಗಿ ಗ್ರಾಮೀಣ ಪ್ರದೇಶಗಳಿಗೆ ಬಸ್ ಬಿಡಿಸಿ ಸ್ವಾಮಿ ಎನ್ನುತ್ತಿದ್ದಾರೆ ತಾಲೂಕಿನ ಕಾನಹೊಸಹಳ್ಳಿ ಸಮೀಪದ ಮಾಳೆಹಳ್ಳಿ ಸೇರಿದಂತೆ ಗಡಿ ಗ್ರಾಮಗಳ ವಿದ್ಯಾರ್ಥಿಗಳು, ಸಾರ್ವಜನಿಕರು.

ಹೌದು.,

ಮಾಳೆಹಳ್ಳಿ ಸೇರಿದಂತೆ ಗಡಿಗ್ರಾಮಗಳಿಗೆ ಸಕಾಲಕ್ಕೆ ಬಸ್ಸಿನ ವ್ಯವಸ್ಥೆ ಸರಿಇಲ್ಲದ ಕಾರಣ ಗಡಿ ಗ್ರಾಮಗಳ ವಿದ್ಯಾರ್ಥಿಗಳೂ ಅನಿವಾರ್ಯವಾಗಿ ಆಟೋಗಳಿಗೆ, ದ್ವಿಚಕ್ರ ವಾಹನಗಳಿಗೆ, ಟ್ರ್ಯಾಕ್ಟರ್ ಮತ್ತಿತರ ಗೂಡ್ಸ್ ವಾಹನಗಳಿಗೆ ಕೈ ಮಾಡಿ ನಿಲ್ಲಿಸಿ ಹೊಸಹಳ್ಳಿ ಗ್ರಾಮಕ್ಕೆ ತೆರಳುವಂತಾಗಿದೆ. ಕೆಲವೊಮ್ಮೆ ಸಕಾಲಕ್ಕೆ ಸರಿಯಾಗಿ ಆಟೋಗಳು ಸಹ ಸಿಗುತ್ತಿಲ್ಲ, ಬಿಸಿಲು, ಮಳೆಯಲ್ಲಿಯೇ ನಡೆದು ಕೊಂಡು ಹೋಗುವ ದೃಶ್ಯ ಸಾಮಾನ್ಯವಾಗಿದೆ. ಈ ಭಾಗದಲ್ಲಿ ಅರಣ್ಯ ಪ್ರದೇಶ ವಿದ್ದು ಕಾಡು ಪ್ರಾಣಿಗಳ ಸಂಚಾರವಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಲ್ಲಿ ಆತಂಕ ಮನೆ ಮಾಡಿದೆ. ಈಗಾಗಲೇ ಅನೇಕ ಬಾರಿ ಬಸ್ಸಿನ ವ್ಯವಸ್ಥೆಗೆ ಮನವಿ ಮಾಡಿದರೂ, ಸಂಬಂಧಪಟ್ಟ ಅಧಿಕಾರಿಗಳು ಸೌಲಭ್ಯ ಕಲ್ಪಿಸುವಲ್ಲಿ ಮೀನಾಮೇಷ ಮಾಡುತ್ತಿದ್ದಾರೆ. ಕಾಯಿಲೆಗೆ ತುತ್ತಾದ ವಯೋವೃದ್ಧರನ್ನು, ಅನಾರೋಗ್ಯಕ್ಕೀಡಾದ ಮಕ್ಕಳನ್ನು ಆಸ್ಪತ್ರೆಗಳಿಗೆ ಕರೆದೊಯ್ಯುವುದು ದುಸ್ತರವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಬಸ್ಸಿನ ವ್ಯವಸ್ಥೆ ಕಲ್ಪಿಸಬೇಕೆಂದು ಶಾಲಾ ವಿದ್ಯಾರ್ಥಿಗಳು, ಪಾಲಕರು ಗ್ರಾಮದ ಜನಪ್ರತಿನಿಧಿಗಳು, ದಲಿತಪರ ಸಂಘಟನೆಗಳು, ಒತ್ತಾಯಿಸಿದ್ದಾರೆ.



> **ನಮ್ಮ ಗಡಿ ಗ್ರಾಮಗಳಿಗೆ ಸುಮಾರು ವರ್ಷಗಳಿಂದ ಬಸ್ಸಿನ ವ್ಯವಸ್ಥೆ ಇಲ್ಲ. ಮಕ್ಕಳು ಶಾಲೆಗಳಿಗೆ ಹೋಗಲು ಪರದಾಡುವಂತಾಗಿದೆ. ಆಸ್ಪತ್ರೆಗೆ ಹೋಗಲು, ಮತ್ತು ಪಡಿತರ ಅಕ್ಕಿ ತರಲು 3 ಕಿಲೋಮೀಟರ್ ದೂರದಲ್ಲಿರುವ, ಕಲ್ಲಹಳ್ಳಿಗೆ ಹೋಗಿ ಬರಲು ಯಾವುದೇ ವ್ಯವಸ್ಥೆ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ನಮಗೆ ಬಸ್ಸಿನ ವ್ಯವಸ್ಥೆ ಕಲ್ಪಿಸಿ ಕೊಟ್ಟರೆ ಉತ್ತಮವಾಗಲಿದೆ.**
>
> **– ಎಚ್. ಟಿ.ಬಸವರಾಜ್**
> ದಲಿತ ಮುಖಂಡರು ಮಾಳೆಹಳ್ಳಿ

> **ನಾವು ತಾಲೂಕಿನ ಗಡಿ ಗ್ರಾಮಗಳಾದ ಮಾಳೆಹಳ್ಳಿ, ತಿಪ್ಪೇಹಳ್ಳಿ, ಕಾತ್ರಿಕೆಹಟ್ಟಿ, ಗ್ರಾಮಗಳಿಗೆ ಮತ್ತೊಮ್ಮೆ ಭೇಟಿ ಮಾಡಿ, ಮೂರ್ನಾಲ್ಕು ದಿನಗಳಲ್ಲಿ ಆ ಗ್ರಾಮಗಳಿಗೆ ಬಸ್ಸಿನ ವ್ಯವಸ್ಥೆ ಮಾಡಿಕೊಡುತ್ತೇವೆ.**
>
> **– ಮರಿಲಿಂಗಪ್ಪ** ಘಟಕ ವ್ಯವಸ್ಥಾಪಕರು, ಸಾರಿಗೆ ಇಲಾಖೆ, ಕೂಡ್ಲಿಗಿ.

### ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೌಕರರ ಒಕ್ಕೂಟದಿಂದ

## ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಕೆ.ತಿಪ್ಪೇಸ್ವಾಮಿಗೆ ಸನ್ಮಾನ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಬಿಡಿಸಿಸಿ ಬ್ಯಾಂಕಿನ ಸಭಾಂಗಣದಲ್ಲಿ ರಾಜ್ಯ ಸರಕಾರದಿಂದ ಸಹಕಾರ ರತ್ನ ಪುರಸ್ಕೃತರಾದ ಬಿಡಿಸಿಸಿ ಬ್ಯಾಂಕ್ ಅದ್ಯಕ್ಷರಾದ ಕೆ.ತಿಪ್ಪೇಸ್ವಾಮಿ ಇವರನ್ನು, ಬಳ್ಳಾರಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನೌಕರರ ಒಕ್ಕೂಟದಿಂದ ಗುರುವಾರ ಸನ್ಮಾನಿಸಲಾಯಿತು.

ಬಿಡಿಸಿಸಿ ಬ್ಯಾಂಕಿನ ನಿರ್ದೇರ್ಶಕರಾದ ಲತಾ ಮಲ್ಲಿಕಾರ್ಜುನ, ಚೊಕ್ಕ ಬಸನಗೌಡ್ರ, ಟಿ ಎಂ ಚಂದ್ರಶೇಖರಯ್ಯ ಸ್ವಾಮಿ,ಎನ್ ಹುಲುಗಪ್ಪ ,ನವೀನ ರೆಡ್ಡಿ, ಎಲ್ ಎಸ್ ಆನಂದ. ಮೂಕಯ್ಯಸ್ವಾಮಿ ಹಾಗೂ ಗುಲ್ಬರ್ಗ ವಿಭಾಗದ ಜಂಟಿನಿಬಂಧಕ ವಿಶ್ವನಾಥ ಮಲಕೋಡ, ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಜಯಪ್ರಕಾಶ. ಮತ್ತು ಬಳ್ಳಾರಿ ವಿಭಾಗದ ಉಪನಿಬಂಧಕರಾದ ಕೇಸರಿಮಠ ಇದ್ದರು, ಬಿಡಿಸಿಸಿ ಬ್ಯಾಂಕ್ ನೌಕರ ಒಕ್ಕೂಟದ ಅಧ್ಯಕ್ಷ ಉಮಾಪತಿ ಹಾಗೂ ಪದಾಧಿಕಾರಿಗಳು ಮತ್ತು ಬಿಡಿಸಿಸಿ ಬ್ಯಾಂಕಿನ ನೌಕರರು ಮತ್ತು ಜಿಲ್ಲೆಯ ಪತ್ತೇತರ ಸಹಕಾರ ಸಂಘಗಳ ಸಿಬ್ಬಂದಿ ಭಾಗವಹಿಸಿದ್ದರು.

## ಸ್ಟುಡೆಂಟ್ ಕಾಲಂ

# ಜಾಣರಾದ ಮಕ್ಕಳು



ಒಂದು ಊರಿನಲ್ಲಿ ಒಬ್ಬ ಬಡ ರೈತನಿದ್ದನು. ಅವನಿಗೆ ಹೆಂಡತಿ ಮತ್ತು ಮೂರು ಮಕ್ಕಳಿದ್ದರು. ಆ ರೈತನು ತುಂಬಾ ಕಷ್ಟಪಟ್ಟು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದನು. ಆದರೆ ಆತನ ಮಕ್ಕಳು ಸೋಮಾರಿಗಳಾಗಿ ಊರೂರು ಸುತ್ತುತ್ತಿದ್ದರು. ದಿನಾಲು ಹೊಲದಲ್ಲಿ ಅಪ್ಪ ಕಷ್ಟಪಟ್ಟು ದುಡಿಯುತ್ತಿದ್ದ. ಅಪ್ಪನ ಕಷ್ಟದ ಬಗ್ಗೆ ಮಕ್ಕಳಿಗೆ ಸ್ವಲ್ಪವೂ ಕನಿಕರವಿರಲಿಲ್ಲ. ದಿನ ಕಳೆದಂತೆ ರೈತನಿಗೂ ವಯಸ್ಸಾಯಿತು. ಮಕ್ಕಳ ಈ ಪರಿಸ್ಥಿತಿಯನ್ನು ನೋಡಿ ಅನಾರೋಗ್ಯ ಉಂಟಾಯಿತು. ಒಮ್ಮೆ ಆ ರೈತನ ಗೆಳೆಯನು ಬಂದು ಈತನ ಮಕ್ಕಳ ಕಥೆಯನ್ನು ಕೇಳಿದನು. ನಂತರ ತನ್ನ ಸ್ನೇಹಿತನ ಕಿವಿಯಲ್ಲಿ ಏನನ್ನೋ ಹೇಳುತ್ತಾನೆ. ಅವನ ಮಕ್ಕಳು ಬರೋತನಕ ಕಾದು ಆ ಮೂವರು ಮಕ್ಕಳನ್ನು ತನ್ನ ಬಳಿಗೆ ಕರೆದು "ನೋಡಿ ಮಕ್ಕಳೇ, ನಿಮ್ಮ ಅಜ್ಜ–ಅವರಜ್ಜರ ಕಾಲದಲ್ಲಿ ಒಂದು ಮಡಿಕೆ ತುಂಬಾ ಹಣವನ್ನು ಇಟ್ಟು ಹೊಲದಲ್ಲಿ ಮುಚ್ಚಿದ್ದಾರಂತೆ. ನಾನು ಇಷ್ಟು ದಿವಸ ಹುಡುಕಿದೆ. ಆದರೆ ನನಗೆ ಸಿಗಲಿಲ್ಲ. ಕಾರಣ ನನಗೀಗ ವಯಸ್ಸಾಗಿದೆ ಹುಡುಕಲು ಸಾಧ್ಯ ವಾಗುವುದಿಲ್ಲ. ನೀವು ಹುಡುಕಿದರೆ ನಿಮಗೆ ಸಿಗಬಹುದು" ಎಂದು ರೈತನು ತನ್ನ ಮಕ್ಕಳಿಗೆ ಹೇಳಿದ. ಮಾರನೇ ದಿವಸ ಮಕ್ಕಳು ಬೆಳಗ್ಗೆ ಬೇಗ ಎದ್ದು ಹೊಲಕ್ಕೆ ಹೋಗಿ ಅಗೆಯ ತೊಡಗಿದರು. ತುಂಬಾ ಸಮಯದ ತನಕ ಅಗಿದರು.



ಆಗ ಅವರ ತಾಯಿ ಅವರಿಗೆ ಊಟ ತಂದಳು. ಅವರು ಊಟ ಮಾಡಿದ ನಂತರ ಅವರಿಗೆ ಕೆಲವು ಬೀಜಗಳನ್ನು ಕೊಟ್ಟಳು. ಅವರು ಆ ಬೀಜಗಳನ್ನು ಮಣ್ಣಲ್ಲಿ ಹಾಕಿ ಮುಚ್ಚಿ ನೀರು ಬಿಟ್ಟರು.

ಒಂದೆರಡು ತಿಂಗಳ ನಂತರ ಫಲ ಬಂದಿತು. ಅವರು ಫಲವನ್ನು ಕೊಯ್ದು ಮಾರಾಟ ಮಾಡಿ ತನ್ನ ತಂದೆಯ ಹತ್ತಿರ ಓಡೋಡಿ ಬಂದು "ಅಪ್ಪಾ ನಾವು ಎಷ್ಟೊಂದು ದುಡ್ಡು ಸಂಪಾದಿಸಿದ್ದೀವಿ ನೋಡಿರಿ" ಎಂದರು. ಅವಾಗ ಅವರಪ್ಪ 'ನೋಡಿ ಮಕ್ಕಳೇ ಯಾವ ಅಜ್ಜರೂ ಕೂಡ ದುಡ್ಡು ಇಟ್ಟಿಲ್ಲ. ನಾನು ನಿಮ್ಮ ಸೋಮಾರಿತನವನ್ನು ನೋಡಿ ನಿಮಗೆ ಇದನ್ನು ಹೇಳಿದೆ. ಆಗ ಮಕ್ಕಳು ತಮ್ಮ ತಪ್ಪನ್ನು ಅರಿತುಕೊಂಡು ಸುಖವಾಗಿ ಬಾಳಿದರು.

– ಪ್ರಮೋದ. ಎನ್.ಎಚ್. 10 ನೇ ತರಗತಿ.
ಸರಕಾರಿ ಪ್ರೌಢಶಾಲೆ. ಸೂಲದಹಳ್ಳಿ. ಕೂಡ್ಲಿಗಿ(ತಾ) ವಿಜಯನಗರ(ಜಿ)

ಕಡಿಮೆ ಖರ್ಚು ಅಧಿಕ ಲಾಭ!
ಮಕ್ಕಳ ಜ್ಞಾನಭಂಡಾರ ಹೆಚ್ಚಿಸಲು
ಇರಲಿ ಮನೆಗೊಂದು ದಿನಪತ್ರಿಕೆ
ಪತ್ರಿಕೆ ಓದುವುದರಿಂದ ಮಕ್ಕಳಿಗಾಗುವ ಪ್ರಯೋಜನೆಗಳು
ಭಾಷಾ ಕೌಶಲ್ಯ ಸುಧಾರಣೆ
ಸಾಮಾನ್ಯ ಜ್ಞಾನ ಹೆಚ್ಚಳ
ನೈತಿಕ ಮತ್ತು ಸಾಮಾಜಿಕ ಅರಿವು
ಮೊಬೈಲಿನಿಂದ ದೂರವಿರುವುದು
ಓದುವ ಹವ್ಯಾಸಕ್ಕೆ ಅಡಿಪಾಯ
ಹೊಸಪೇಟೆಯಲ್ಲಿ ಹಂಪಿ ಟೈಮ್ಸ್ ಪತ್ರಿಕೆಗಾಗಿ ಸಂಪರ್ಕಿಸಿ
99029 09399, 99805 59681
97407 42251, 80735 89125

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಯಶಸ್ಸಿನ ಸೂತ್ರಗಳು

ಪ್ರತಿಯೊಬ್ಬರೂ ಬದುಕಿನಲ್ಲಿ ಯಶಸ್ಸನ್ನು ಪಡೆಯಬೇಕು ಎಂದು ಆಶಿಸುವವರೇ. ಎಲ್ಲವೂ ಸುಲಭವಾಗೇ ಸಿಗಬೇಕೆಂದು ಬಯಸುವವರು ಕೂಡ. ಯಶಸ್ಸನ್ನು ಕೂಡ ಕಡಿಮೆ ಅಂದಾಜು ಮಾಡುತ್ತಾರೆ. ಕಷ್ಟಪಟ್ಟು ದುಡಿಯೋ ಮೊದಲೇ ದಣಿಯುವವರು, ಎಲ್ಲದಕ್ಕೂ ತಮ್ಮ ಹಣೆಬರಹ ಸರಿ ಇಲ್ಲ ಎಂದು ಅದೃಷ್ಟವನ್ನು ಹಳಿಯುವವರು, ಅಯ್ಯೋ ನಾವು ಪಡೆದುಕೊಂಡು ಬಂದಿಲ್ಲ ಎಂದು ಹೇಳುವವರು ಅರಿಯದ ಸಂಗತಿಯೊಂದಿದೆ.

ನಾವು ದುಡಿಯುವ ಹಣಕ್ಕೆ ಕಂದಾಯ ಕಟ್ಟುವಂತೆ, ಯಶಸ್ಸನ್ನು ಪಡೆಯಲು ಕೂಡ ನಾವು ಕೆಲ ಕಂದಾಯಗಳನ್ನು ಕಟ್ಟಬೇಕಾಗುತ್ತದೆ... ಅವು ಹಣದ ರೂಪದಲ್ಲಿ ಇರುವುದಿಲ್ಲ ಆದರೆ ಯಶಸ್ಸನ್ನು ಗಳಿಸಲು ಅದರದ್ದೇ ಆದ ಕೆಲವು ಮಾನದಂಡಗಳಿವೆ.

ಅಂತಹ ಯಶಸ್ಸನ್ನು ಗಳಿಸಲು ಅವಶ್ಯಕ ಸೂತ್ರಗಳನ್ನು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.



* ಅವಶ್ಯಕತೆಗಳನ್ನು ಅರಿತುಕೊಳ್ಳಿ. ಯಶಸ್ಸನ್ನು ಪಡೆಯಲು ನಿಜವಾಗಿಯೂ ನೀವು ಏನು ಬಯಸುವಿರಿ ಎಂಬುದನ್ನು ಸಾಕಷ್ಟು ಸಮಯ ಯೋಚಿಸಿ ಒಂದು ನಿರ್ಧಾರಕ್ಕೆ ಬನ್ನಿ. ಇದು ನಿಮಗೆ ಸ್ಪಷ್ಟತೆಯನ್ನು ನೀಡುವ ಮೂಲಕ ಉತ್ತಮ ನಿರ್ಣಯಗಳನ್ನು ಕೈಗೊಳ್ಳಲು, ಸಮಯ ನಿರ್ವಹಣೆ ಮತ್ತು ಶಕ್ತಿ ಸಾಮರ್ಥ್ಯಗಳನ್ನು ಒಗ್ಗೂಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.

* ಗೊಂದಲಗಳನ್ನು ನಿವಾರಿಸಿಕೊಳ್ಳಿ ಯಶಸ್ಸಿನೆಡೆಗಿನ ಪಯಣದ ಹಾದಿಯಲ್ಲಿ ನಿಮ್ಮನ್ನು ಗೊಂದಲಕ್ಕೆ ಈಡು ಮಾಡುವ, ನಿಮ್ಮ ಪಯಣದ ಹಾದಿಯಲ್ಲಿ ಮುಳ್ಳಾಗುವ, ನಿಮ್ಮನ್ನು ವಿಮುಖಗೊಳಿಸುವ ಸಂಗತಿಗಳಿಂದ ದೂರವಿರಿ ಇಲ್ಲವೇ ಆ ಸಂಗತಿಗಳಿಗೆ ಬಳಸುವ ಸಮಯವನ್ನು ಕಡಿಮೆಗೊಳಿಸಿ. ಉದಾಹರಣೆಗೆ ಸಾಮಾಜಿಕ ಜಾಲತಾಣಗಳ ಬಳಕೆ, ಅವುಗಳು ತೋರಿಸುವ ನೋಟಿಫಿಕೇಶನ್ ಗಳು ಕೇವಲ ಐದು ನಿಮಿಷ ನೋಡುತ್ತೇನೆ ಎಂದು ಗಂಟೆಗಟ್ಟಲೆ ಅವುಗಳಲ್ಲಿಯೇ ಮುಳುಗಿಬಿಡುವುದು ನಮ್ಮ ಸಮಯ ಮತ್ತು ಶಕ್ತಿಯನ್ನು ವ್ಯಯಿಸುತ್ತವೆ.

* ಅವಶ್ಯಕ ವಿಷಯಗಳ ಕಡೆ ಗಮನಹರಿಸಿ... ಅವಶ್ಯಕ ವಿಷಯಗಳನ್ನು ಮಾತ್ರ ಆಲಂಗಿಸುವ ಮತ್ತು ಅನವಶ್ಯಕ ಸಂಗತಿ ಮತ್ತು ಒಪ್ಪಂದಗಳನ್ನು ಗಳನ್ನು ದೂರವಿರಿಸುವ ಮೂಲಕ ನಿಮ್ಮ ಸಮಯ ಮತ್ತು ಶ್ರಮವನ್ನು ಉಳಿಸಿಕೊಳ್ಳಿ.

ಹಂಸ ಕ್ಷೀರ ನ್ಯಾಯ ಎಂಬ ಮಾತನ್ನು ನೀವು ಕೇಳಿರಬಹುದು. ನೀರು ಬೆರೆತ ಹಾಲಿನಲ್ಲಿ ಕೇವಲ ಹಾಲನ್ನು ಮಾತ್ರ ಸೇವಿಸುವ ಹಂಸ ಪಕ್ಷಿಯಂತೆ ಸಾಧನೆಯ ಹಾದಿಯಲ್ಲಿ ನಡೆಯಬಯಸುವವರು ಅನವಶ್ಯಕ ಹರಟೆ, ಸಾಮಾಜಿಕ ಸಂವಹನಗಳಲ್ಲಿ ಭಾಗಿಯಾಗು ವುದನ್ನು ತಪ್ಪಿಸಿಕೊಳ್ಳಬೇಕು.

ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಯೊಬ್ಬರು ಅಪಘಾತ ಒಂದರಲ್ಲಿ ಮಗಳನ್ನು ಕಳೆದುಕೊಂಡರು. ಬಹುತೇಕ ಹಾಸಿಗೆ ಹಿಡಿದ ಪತ್ನಿಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಅವರು ತಮ್ಮ ವೈಯಕ್ತಿಕ ಜೀವನದಲ್ಲಿ ವ್ಯಸ್ತರಾಗಿ ಆ ವರ್ಷ ಯಾವುದೇ ರೀತಿಯ ಸಾಧನೆ ತೋರಲಿಲ್ಲ ಎಂದು ಅವರನ್ನು ಗೌರವ ಪೂರ್ವ ಕವಾಗಿ ಕೆಲಸದಿಂದ ತೆಗೆದು ಹಾಕಿದ ಘಟನೆಯನ್ನು ನಾವಿಲ್ಲಿ ನೆನಪಿಸಿ ಕೊಳ್ಳಬೇಕು. ನಮ್ಮಲ್ಲಿ ಚಿಕ್ಕ ಪುಟ್ಟ ಪ್ರಶಸ್ತಿಗಳು ಬಂದಾಗ ಕೂಡ ದಿನದ ಬಹು ಭಾಗ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸುವ ವ್ಯಕ್ತಿ ತನ್ನ ಯಶಸ್ಸಿನ ಪಯಣದಿಂದ ವಿಮುಖನಾಗುತ್ತಾನೆ, ಆದ್ದರಿಂದಲೇ ಮಹಾನ್ ವ್ಯಕ್ತಿಗಳು ಸರ್ವ ಶ್ರೇಷ್ಠ ಪ್ರಶಸ್ತಿಗಳು ತಮಗೆ ದೊರೆತಾಗಲೂ ಕೂಡ ಸಾಮಾಜಿಕ ನಿರ್ಲಿಪ್ತಿಯನ್ನು ಸಾಧಿಸುತ್ತಾರೆ ಯಾಕೆಂದರೆ ಅವರ ಯಶಸ್ಸಿನ ಪಯಣ ಕೇವಲ ಪ್ರಶಸ್ತಿಯನ್ನು ಪಡೆಯಲು ಇರುವುದಿಲ್ಲ ಎಂಬುದರ ನಿಚ್ಚಳ ಅರಿವು ಅವರಿಗೆ ಇರುತ್ತದೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

* ಸ್ಪಷ್ಟ ಗುರಿಗಳನ್ನು ಹೊಂದಿರಬೇಕು... ನಿಮ್ಮ ಅವಶ್ಯಕತೆಗಳಿಗೆ ಸರಿಹೊಂದುವ ಸ್ಪಷ್ಟ ಮತ್ತು ನಿರ್ದಿಷ್ಟ ಯೋಜನೆಗಳನ್ನು ಹೊಂದುವ ಮೂಲಕ ನೀವು ಸದಾ ನಿಮ್ಮ ಗುರಿಯೆಡೆ ಲಕ್ಷ್ಯ ವಹಿಸಲು ಸಾಧ್ಯವಾಗುತ್ತದೆ.

* ದಿನಚರಿಯನ್ನು ರೂಡಿಸಿಕೊಳ್ಳಿ... ನಿಗದಿತ ದಿನಚರಿಯು ರಚನಾತ್ಮಕತೆ ಮತ್ತು ನಿಯಮಿತತೆಯನ್ನು ತಂದುಕೊಡುತ್ತದೆ. ಸರಿಯಾದ ದಿನಚರಿಯನ್ನು ಅಳವಡಿಸಿಕೊಂಡಾಗ ಅವಶ್ಯಕತೆಗೆ ಸಮಯವನ್ನು ಹೊಂದಿಸಿಕೊಳ್ಳುವುದನ್ನು ರೂಡಿಸಿಕೊಳ್ಳಬಹುದು ಮತ್ತು ಅನವಶ್ಯಕ ದಣಿವಾಗುವುದನ್ನು ತಪ್ಪಿಸಬಹುದು

* ಸರಳತೆಯನ್ನು ರೂಡಿಸಿಕೊಳ್ಳಿ....ಅನವಶ್ಯಕ ವಸ್ತುಗಳನ್ನು ಮತ್ತು ವಿಷಯಗಳನ್ನು ಸಂಗ್ರಹಿಸದಿರಿ. ನಿಮಗೆ ಬೇಡವೆನಿಸಿದ, ಮನೆಯಲ್ಲಿ ಸ್ಥಳವನ್ನು ಆಕ್ರಮಿಸುವ ಅನಗತ್ಯ ವಸ್ತುಗಳನ್ನು ಇಟ್ಟುಕೊಳ್ಳಬೇಡಿ. ಭೌತಿಕ ವಸ್ತುಗಳು ಮಾತ್ರವಲ್ಲ ಎಲೆಕ್ಟ್ರಾನಿಕ್ ಗ್ಯಾಜೆಟ್ ಗಳನ್ನು, ಕೂಡ ಹೊಂದಿರಬಾರದು. ಅನವಶ್ಯಕ ಹೊಂದಾಣಿಕೆಗಳನ್ನು ಮಾಡಿಕೊಳ್ಳ ಬಾರದು.

* ಧ್ಯಾನಪೂರ್ವಕವಾಗಿ ಕಾರ್ಯನಿರ್ವಹಿಸಿ... ಧ್ಯಾನ ಎಂಬುದು ಯೋಗದ ಭಾಗ ಮಾತ್ರ ಎಂಬ ಮೌಢ್ಯ ಖಂಡಿತ ಬೇಡ. ತನು ಮನ ಪೂರ್ವಕವಾಗಿ ಕಾರ್ಯನಿರ್ವಹಿಸಿ. ನಿಮ್ಮ ಯೋಚನೆಗಳು ಭಾವನೆಗಳು ಮತ್ತು ನಿಮ್ಮ ಸುತ್ತಣ ಪರಿಸರದ ಕುರಿತು ಯಾವಾಗಲೂ ಗಮನವಿರಲಿ. ಇದರಿಂದ ನೀವು ನಿಮ್ಮ ಕೆಲಸದಲ್ಲಿ ಉದ್ದೇಶಪೂರ್ವಕ ಆಯ್ಕೆಗಳನ್ನು ಮಾಡಬೇಕು.

* ನಿಮ್ಮ ಮನೋ ದೈಹಿಕ ಆರೋಗ್ಯದ ಕಾಳಜಿ ಮಾಡಿಕೊಳ್ಳಿ. ದೈಹಿಕ ವ್ಯಾಯಾಮ, ಸತ್ವಯುತ ಆಹಾರ, ಗುಣಮಟ್ಟದ ನಿದ್ರೆ ಮತ್ತು ವಿಶ್ರಾಂತಿಯನ್ನು ಹೊಂದುವುದರ ಮೂಲಕ ದೈಹಿಕ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಹೊಂದಿರಬೇಕು.

ಬೇಡ ಎಂದು ಹೇಳುವುದನ್ನು ರೂಢಿಸಿಕೊಳ್ಳಿ... ಆಯ್ಕೆಯ ವಿಷಯದಲ್ಲಿ ತುಂಬಾ ಜಾಗರೂಕರಾಗಿರಿ. ಅನವಶ್ಯಕ ವಿಷಯಗಳಿಗೆ ಯಾವುದೇ ಮುಜುಗರ, ಭಿಡೆಗಳನ್ನು ಹೊಂದದೆ ನಿರಾಕರಿಸುವ ಮೂಲಕ ನಿಮ್ಮ ಸಮಯವನ್ನು ಉಳಿಸಿಕೊಳ್ಳಿ ಮತ್ತು ಗುರಿಯನ್ನು ತಲುಪಲು ಪ್ರಯತ್ನಿಸಿ.

ನಿರಂತರ ಮೌಲ್ಯಮಾಪನ ಮತ್ತು ಹೊಂದಾಣಿಕೆಯನ್ನು ರೂಢಿಸಿಕೊಳ್ಳಿ.. ಆದಾಗ ನಿಮ್ಮ ಅವಶ್ಯಕತೆಗಳು ಗುರಿ ಮತ್ತು ಬದ್ಧತೆಗಳ ಕುರಿತು ಅವಲೋಕನ ಮಾಡಿಕೊಳ್ಳಿ. ನಿಮ್ಮ ಗುರಿಯೆಡೆಗೆ ತಲುಪುವ ಹಾದಿಗೆ ಅನುಕೂಲವಾಗುವಂತೆ ಹೊಂದಾಣಿಕೆ ಮಾಡಿಕೊಳ್ಳಿ.

ಯಶಸ್ಸಿನ ಹಾದಿ ಎಂದೂ ಹೂವಿನ ಹಾಸಿಗೆಯಲ್ಲ ಎಂಬುದು ಕ್ರಮಿಸುವವರಿಗೆ ಮಾತ್ರ ಗೊತ್ತು. ಯಶಸ್ಸಿನ ಹಾದಿಯಲ್ಲಿ ಪಯಣಿಸುವವರು ಬೇರೆಯವರು ತಮ್ಮತ್ತ ಎಸೆಯುವ ಪ್ರತಿಯೊಂದು ಕಲ್ಲನ್ನು ಎಣಿಸುತ್ತಾ ಕುಳಿತರೆ ಪಯಣ ಕುಂಠಿತವಾಗುತ್ತದೆ. ತಮ್ಮತ್ತ ಎಸೆಯಲ್ಪಟ್ಟ ಪ್ರತಿಯೊಂದು ಕಲ್ಲನ್ನು ಮೆಟ್ಟಿಲನ್ನಾಗಿಸಿ ಮೇಲೆ ಹತ್ತುವ ಜಾಣ್ಮೆ ತಮಗಿರಬೇಕು..

ಖಂಡಿತವಾಗಿಯೂ ಯಶಸ್ಸು ದೊರೆಯುತ್ತದೆ. ಆದರೆ ಅಂತಿಮವಾಗಿ ಒಂದು ಮಾತು... ಏರಿದವನು ಚಿಕ್ಕವನಿರಲೇಬೇಕು ಎಂಬ ಮಾತನ್ನು ಸಾರುವನು... ಎಂದು ಸೂರ್ಯನ ಕುರಿತು ನಮ್ಮ ಕನ್ನಡದ ಕವಿಗಳು ಹಾಡಿ ಹೊಗಳಿದಂತೆ ಅದೆಷ್ಟೇ ಯಶಸ್ಸಿನ ಅಲೆಯಲ್ಲಿ ತೇಲಾಡಿದರೂ ನಾವು ವಿನಮ್ರರಾಗಿರಬೇಕು.

ತುಂಬಿದ ಕೊಡ ತುಳುಕುವುದಿಲ್ಲ ಎಂದು ಹೇಳುವುದು ಇದೇ ಕಾರಣಕ್ಕೆ ಎಂಬುದನ್ನು ಅರಿತು ನಮ್ಮ ಯಶಸ್ಸಿನ ಕುರಿತು ಅಹಂಭಾವದಿಂದ ಮೆರೆಯದೇ ವಿನೀತರಾಗಿರಬೇಕು. ನಮ್ಮ ಕತ್ತಿನ ಮೇಲೆಯೇ ನಮ್ಮ ತಲೆ ಇರಬೇಕು. ಏನಂತೀರಾ ಸ್ನೇಹಿತರೆ?

# ಎಲ್ಲವೂ ನಮ್ಮದು; ಯಾವುದೂ ನಮ್ಮದಲ್ಲ!

ಒಮ್ಮೆ ಬಸ್‌ನ ಪ್ರಯಾಣದಲ್ಲಿ ಸೀಟು–ಗಾಗಿ ಸಣ್ಣ ಜಗಳ ಶುರುವಾಯಿತು. ಮೊದಲ ವ್ಯಕ್ತಿ ಈ ಸೀಟು ನಿನ್ನದ? ಎಂದಾಗ, ಎರಡನೇ ವ್ಯಕ್ತಿ ನನ್ನದೂ ಅಲ್ಲ ನಿನ್ನದೂ ಅಲ್ಲ. 'ನಮ್ಮದು' ಎಂದು ಪ್ರತ್ಯುತ್ತರ ನೀಡಿದ. ಮೊದಲ ವ್ಯಕ್ತಿ ನಮ್ಮದು ಎಂಬುದು 'ನನ್ನದು' ಎಂದು ಅರ್ಥೈಸಿಕೊಂಡು, ನಿನ್ನದಲ್ಲ 'ಈ ಬಸ್ಸು ಸರ್ಕಾರದ್ದು' ಎಂದ. ಆಗ ಎರಡನೇ ವ್ಯಕ್ತಿ ಸರ್ಕಾರವೆಂದರೆ ಯಾವುದು? ಯಾರು? ನಾವು ನೀವೆಲ್ಲರೂ ಸೇರಿ ರಚಿಸಿರುವುದಲ್ಲವೆ? ಹಾಗಾಗಿ ಇದು 'ನಮ್ಮದು' ಎಂದು ಬಿಡಿಸಿ ಹೇಳಿದ. ನಮ್ಮಲ್ಲಿರುವಂತೆ ಇತರರಲ್ಲೂ ನನ್ನದೆಂಬ ಅಹಂನ ಹಸಿವಿರುತ್ತದೆ. ನಮ್ಮ ಹಸಿವಿನ ತಾಪದಲ್ಲಿ ಇತರರ ಹಸಿವನ್ನು ಮರೆತು ಬಿಡುತ್ತೇವೆ. ಇದರಿಂದ ಮಾನವೀಯ ಸಂಬಂಧ ಕೆಡುತ್ತದೆ ತಕ್ಷಣ ಜಗಳ ಶುರುವಾಗುತ್ತದೆ. ಕ್ಷಣ ಕ್ಷಣಕ್ಕೂ ಸಣ್ಣ ಸಣ್ಣ ವಿಷಯಗಳ ಹಸಿವು ನಮ್ಮನ್ನು ಆವರಿಸಿಬಿಡುತ್ತದೆ. ಇವೆಲ್ಲಾ ಅಹಂನ ಹಸಿವು ಮತ್ತು ಪ್ರತಿಷ್ಠೆ ಪ್ರತೀಕ ಮಾತ್ರ. ಬುದ್ಧಿ ಅಹಂಗೆ ಸಹಕರಿಸಿದರೆ ಭಾವನೆ ಮಾನವೀಯತೆಗೆ ಸಹಕರಿಸುತ್ತದೆ. ಈ ಭೌತಿಕ ಹಸಿವು ನೀಗಿಸಲು ಮನುಷ್ಯ ಏನೆಲ್ಲಾ ವಿಚಿತ್ರವಾಗಿ ವರ್ತಿಸುತ್ತಾನೆ. ಸಮಯ ಸಂದರ್ಭವನ್ನು ಪ್ರತಿಯೊಬ್ಬರೂ ಅರಿತುಕೊಂಡಾಗ ಮಾತ್ರ ಯಾವ ಗೊಂದಲಗಳು ಸೃಷ್ಟಿಯಾಗುವುದಿಲ್ಲ.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Scan For Digital Colourful
HAMPI TIMES E-paper



ಒಂದು ದಿನದಲ್ಲಿ ನಾವು ಎಷ್ಟು ಬಾರಿ ನಾನು ನನ್ನದು ನನ್ನಿಂದ ಎಂದು ಗರ್ವದಿಂದ ವರ್ತಿಸುತ್ತಿರುತ್ತೇವೆ. ಈ ಜಾತಿಯವ, ಈ ಊರು, ಈ ವಸ್ತು ಎಂದು ಹೇಳುತ್ತಿರುತ್ತೇವೆ. ಯಾವುದೂ ವಾಸ್ತವವಲ್ಲ ಹಾಗೂ ನಿತ್ಯವಲ್ಲ. ಕೇವಲ ಮನಸ್ಸಿನ ಪರಿಧಿಯಲ್ಲಿ ಮಾತ್ರ. ಒಮ್ಮೆ ಗುರುಗಳ ದರ್ಶನಕ್ಕೆಂದು ನಿಜಗುಣ ಶಿವಯೋಗಿಗಳು ಶಂಭುಲಿಂಗನ ಬೆಟ್ಟಕ್ಕೆ ಹೋದಾಗ ಗುರುಗಳು "ನೀನಾರಪ್ಪಾ?" ಎಂದು ಕೇಳಿದರು. ನಿಜಗುಣರು "ಗುರುಗಳೇ, ನಾನಾರೆಂಬುದನ್ನು ಅರಿಯಲು ನಿಮ್ಮ ಸನ್ನಿಧಿಗೆ ಬಂದಿರುವೆ" ಎಂದರಂತೆ. ಋಷಿಮುನಿಗಳು, ಶರಣರು, ದಾಸರು, ತತ್ವಪದಕಾರರು ಹೀಗೆ ಮಹಾಪುರುಷರಾದಿಗಳೆಲ್ಲಾ ತಾನಾರೆಂಬುದನ್ನು ಹುಡುಕಲು ಬದುಕಿನುದ್ದಕ್ಕೂ ಪ್ರಯತ್ನಿಸಿದವರು. 'ನಾನು' ಎಂಬ ಎರೆಡಕ್ಷರ ಮನುಷ್ಯನನ್ನು ತಿನ್ನುತ್ತದೆ, ಕೊನೆಗೆ ಕೊಲ್ಲುತ್ತದೆ.

ವಾಸ್ತವವನ್ನು ಅರಿತಿರುವ ವ್ಯಕ್ತಿ ಯಾವುದೇ ಇಸಂಗಳಿಗೆ ಒಳಗಾಗುವುದಿಲ್ಲ. ವಾಸ್ತವ ಜಗತ್ತೇ ನಿಜವಲ್ಲ. ಅದಕ್ಕೆ ಆಧ್ಯಾತ್ಮದ (ಇದು ಸಕಲ ವಿದ್ಯೆಗಳ ರಾಜ) ಜಗತ್ತು ಏನೆಲ್ಲಾ ತಿಳಿವಳಿಕೆಯನ್ನುಂಟು ಮಾಡುತ್ತದೆ. ಹೊರಗಿನ ಪ್ರಪಂಚದ ಗಾಳಿ ಬೆಳಕು ಅಥವಾ ಶರೀರದ ದಪ್ಪ–ಸಣ್ಣಗಳೆಲ್ಲಾ ಸ್ವರೂಪಕ್ಕೆ ಸಂಬಂಧಿಸಿದವುಗಳು. ಇಂದ್ರಿಯಗಳಿಗೆ ಸಂಬಂಧವಿಲ್ಲ. ಕೆಲವೊಮ್ಮೆ ನಾವು ತಿಳಿದೋ ತಿಳಿಯದೆಯೋ ಪ್ರತಿಯೊಂದು ವಸ್ತು ವಿಷಯ ವಾಸನೆಗಳಿಗೆ ಒಳಗಾಗುತ್ತೇವೆ. ಅದು ಬೇಕು ಇದು ಬೇಕು ಎಂಬ ಆಸೆ ಆಮಿಷಗಳಲ್ಲಿ ಮುಳುಗುತ್ತೇವೆ. ದೊರಕದಾದಾಗ ನಿರಾಶೆ ಆವರಿಸುವುದು ಸಹಜ. ಆದರೂ ಮರಳಿಯತ್ನವ ಮಾಡಿ ಸಾಕಷ್ಟು ಹಣ, ಅಧಿಕಾರ, ವೈಭೋಗ ಪಡೆಯಬಹುದು, ಅದು ದೊಡ್ಡದಲ್ಲ. ಅವೆಲ್ಲವು ಅಶಾಶ್ವತ ಎಂಬ ಅರಿವು ನಮ್ಮದಾಗಬೇಕು. ಸರ್ವಜ್ಞ ಕವಿ ಹೀಗೆ ಹೇಳಿದಂತೆ: "ಸಿರಿಯ ಸಂಸಾರವು ಸ್ಥಿರವೆಂದು ನಂಬದಿರು। ಹಿರಿದೊಂದು ಸಂತೆ ನೆರೆದೊಂದು ಜಾವಕ್ಕೆ ಹರಿದು ಹೋದಂತೆ। ಸರ್ವಜ್ಞ" ಪ್ರತಿದಿನ ಸಾವಿರ, ಲಕ್ಷ, ಕೋಟಿ ಎಂದು ಮಾತಾಡುವವ ಶ್ರೀಮಂತನಲ್ಲ. ಮಾನವೀಯತೆ, ಪರರೋಪಕಾರ, ದೀನದುಃಖಿಗಳ ಸಲುವಾಗಿ ಸಹಕರಿಸುವವನೇ ನಿಜವಾದ ಶ್ರೀಮಂತ. ಒಟ್ಟಾರೆ ವಿವೇಕ ಪೂರ್ಣವಾದ ವೈರಾಗ್ಯ ಹೊಂದಿದಾಗ ಜಗತ್ತಿನ ಯಾವ ಜಂಜಾಟಗಳಿಂದ ಭಯಭೀತರಾಗುವುದಿಲ್ಲ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಗೊಲ್ಲರಾಗುವುದೆಂತು

ತನುವಿನಲ್ಲೇ ದೇವ ನೆಲೆಸಿ
ಜನುಮ ನಿನ್ನದು ಪೂಜ್ಯವೆನಿಸಿ
ಮನುಜ ಬಾಳಿನ ಭಾಗ್ಯವಾಗಿಹೆ ತಾಯೆ
ಗೋಮಾತೆಯೆ
॥ಮನುಜರನ್ನು ಪೊರೆಯೆ ಬಂದಿಹ ಕಾಮಧೇನುವ
ಕಥೆಯಿದು॥

ಭುವಿಯ ಮಂದಿಗೆ ನೆರವನೀಯೆ
ಬವಣೆ ಕಳೆವ ನಿಲುವು ಮನದೆ
ತವಕದಿಂದಲೆ ಧರೆಗೆ ಬಂದೆಯ ನೀನು
ಗೋಮಾತೆಯೆ॥ ಮನುಜರನ್ನು..॥

ಹರಿವ ಜಲವ ಕುಡಿದುಕೊಂಡು
ದೊರೆತ ಕಸವ ಮೆದ್ದು ಬಂದು
ನೊರೆಯ ಹಾಲು ನಮಗೆ ಕೊಡುವೆ ಹೇಗೆ ಋಣವನು
ಸಲಿಸಲಿ ॥ ಮನುಜರನ್ನು...॥

ಇಲ್ಲಿ ನೋಡು ನಿನ್ನ ಪಾಡು
ಹುಲ್ಲು ಮೇಯೆ ಇಲ್ಲ ಕಾಡು
ಕಲ್ಲು ಮನಸಿನ ಮನುಜ ನುಂಗಿದ ನಿನ್ನ ಗೋಮಾಳವ
॥ ಮನುಜರನ್ನು..॥

ಕೆಲವರಿರುವರು ನಿನ್ನ ನಂಬಿ
ಸಲಹುತಿರುವರು ಮೈಯ ತಡವಿ
ಬಳಿಕ ನಿನ್ನ ಮಾರಿಬಿಡುವರು ಹಾಲನೀವುದು ನಿಂತರೆ
॥ ಮನುಜರನ್ನು...॥

ಮೇಯಲೆಂದು ಹೊರಗೆ ಬಿಡಲು
ಬೇಯಲಿಡುವರು ನಿನ್ನ ಕೊಂದು
ತಾಯೆ ನಿನ್ನನು ಹೇಗೆ ಉಳಿಸಲಿ ಚಿಂತೆ ಕಾಡಿದೆ
ಮನದೊಳು ॥ ಮನುಜರನ್ನು...॥

ಸುಳ್ಳು ಹೇಳುತ ನಮ್ಮ ನಡುವೆ
ಕಳ್ಳರಿರುವರು ನಿನ್ನ ಕದಿಯೆ
ಗೊಲ್ಲರಾಗುವುದೆಂತೊ ಅರಿಯೆ ನಿನ್ನ ಪೂಜಿಪ
ನಾಡೊಳು ॥ ಮನುಜರನ್ನು...॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಕಲಿಕೆಯಲ್ಲಿ ಕಟ್ಟುನಿಟ್ಟಾಗಿ ಸಮಯ ಪಾಲಿಸಿ

## ಭಾಷಾ ನಿಕಾಯದ ಡೀನ್ ಡಾ. ಎಫ್.ಟಿ. ಹಳ್ಳಿಕೇರಿ ಹೇಳಿಕೆ | ಸ್ಪರ್ಧಾರ್ಥಿಗಳಲ್ಲಿ ಆಸಕ್ತಿ, ಕ್ಷಮತೆ ಅಗತ್ಯ




■ ಹಂಪಿ ಟೈಮ್ಸ್ ಹೊಸಪೇಟೆ

ಇದು ಸ್ಪರ್ಧಾತ್ಮಕ ಯುಗ. ಈ ಯುಗದಲ್ಲಿ ಪರೀಕ್ಷಾರ್ಥಿಗಳು ನಿರಂತರ ಅಧ್ಯಯನ, ಸ್ವ–ಆಸಕ್ತಿ, ಕ್ಷಮತೆ ಮತ್ತು ಸಮಯ ಪರಿಪಾಲನೆಯನ್ನು ರೂಢಿಸಿಕೊಳ್ಳುವುದು ತುಂಬಾ ಮುಖ್ಯ ಎಂದು ಭಾಷಾ ನಿಕಾಯದ ಡೀನರಾದ ಡಾ. ಎಫ್.ಟಿ. ಹಳ್ಳಿಕೇರಿ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಗುರುವಾರ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ ಮತ್ತು ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹಯೋಗದಲ್ಲಿ ಎರಡು ವಾರಗಳ ಕಾಲ ಆಯೋಜಿಸಿದ್ದ ಯುಜಿಸಿ ನೆಟ್ ಮತ್ತು ಕೆ–ಸೆಟ್ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಇಂದು ಕೆ.ಎ.ಎಸ್., ಐ.ಎ.ಎಸ್., ಪಿಡಿಓ ಹೀಗೆ ಹಲವಾರು ಅವಕಾಶಗಳಿವೆ. ವಿದ್ಯಾರ್ಥಿಗಳು ಯಾವುದಾದರೂ ಒಂದನ್ನು ಸರಿಯಾಗಿ ಆಯ್ಕೆ ಮಾಡಿಕೊಳ್ಳಬೇಕು. ಓದು, ಬರಹ, ಪರೀಕ್ಷೆಗಳಿಗೆ ತಯಾರಿ ಎಲ್ಲದರಲ್ಲೂ ಕಟ್ಟುನಿಟ್ಟಾಗಿ ಸಮಯ ಪರಿಪಾಲಿಸುವುದು ಅಗತ್ಯ. ಸಮಯ ಪರಿಪಾಲನೆಗಾಗಿ ವೇಳಾಪಟ್ಟಿಯನ್ನು ಹಾಕಿಕೊಳ್ಳಬೇಕು. ಇದರಿಂದ ಹಿಡಿದ ಕೆಲಸವನ್ನು ಪರಿಪೂರ್ಣಗೊಳಿಸಬಹುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಓದುವ ಕ್ರಮ ಮತ್ತು ಆಸ್ವಾದಿಸುವ ಕ್ರಮ ತುಂಬಾ ಮುಖ್ಯ. ವಿದ್ಯಾರ್ಥಿಗಳು ಯಾವುದೇ ವಿಷಯವನ್ನು ಲಕ್ಷ್ಯಕೊಟ್ಟು ಅಭ್ಯಾಸ ಮಾಡಬೇಕು ಎಂದು ಕಿವಿಮಾತು ಹೇಳಿದರು. ಮುಂದಿನ ದಿನಮಾನಗಳಲ್ಲಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರತ್ಯೇಕವಾಗಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರವನ್ನು ಆರಂಭಿಸಲು ಕುಲಪತಿಗಳಿಗೆ ಮನವಿ ಸಲ್ಲಿಸುತ್ತೇವೆ ಎಂದರು.

ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥರಾದ ಡಾ. ಯರ್ರಿಸ್ವಾಮಿ ಅವರು ವರದಿ ಮಂಡನೆ ಮಾಡುತ್ತ, ಎರಡು ವಾರಗಳ ಕಾಲ ಆಯೋಜಿಸಿದ್ದ ಈ ಯುಜಿಸಿ ನೆಟ್ ಮತ್ತು ಕೆ–ಸೆಟ್ ಕಾರ್ಯಾಗಾರದಲ್ಲಿ 130ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಣಿಯಾಗಿದ್ದಾರೆ. ಇದರಲ್ಲಿ ಶೇ.65 ರಷ್ಟು ವಿದ್ಯಾರ್ಥಿಗಳು ಮತ್ತು ಶೇ.35 ರಷ್ಟು ವಿದ್ಯಾರ್ಥಿನಿಯರು ಭಾಗವಹಿಸಿದ್ದಾರೆ. ಈ ಕಾರ್ಯಗಾರದಲ್ಲಿ ಈಗಾಗಲೇ ನೆಟ್, ಜೆಆರ್‌ಎಫ್ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಹಿರಿಯ ವಿದ್ಯಾರ್ಥಿಗಳನ್ನು ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಂಡು, ಅವರ ಮೂಲಕ ಉಪನ್ಯಾಸಗಳನ್ನು ನೀಡಲಾಯಿತು. ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು ಎಂದರು.

ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಮತ್ತು ಸಂಪನ್ಮೂಲ ವ್ಯಕ್ತಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಈ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಮಲ್ಲಿಕಾರ್ಜುನಗೌಡ, ಪ್ರಾಧ್ಯಪಕ ಡಾ.ವೆಂಕಟಗಿರಿ ದಳವಾಯಿ, ಡಾ. ಗೋವಿಂದ, ಶಿಬಿರಾರ್ಥಿಗಳು, ಬೋಧಕ–ಬೋಧಕೇತರ ಸಿಬ್ಬಂದಿ ಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಶೋಧನಾರ್ಥಿ ರವಿಚಂದ್ರ ನಿರೂಪಿಸಿದರು.

# ವಿವಿಧೆಡೆ ದಾಳಿ; ನಾಲ್ವರು ಬಾಲ ಕಾರ್ಮಿಕರ ರಕ್ಷಣೆ

■ ಹಂಪಿ ಟೈಮ್ಸ್ ಬಳ್ಳಾರಿ

ಕಾರ್ಮಿಕ ಇಲಾಖೆ ವತಿಯಿಂದ ಬಳ್ಳಾರಿ ನಗರದ ಸುಧಾಕ್ರಾಸ್, ಗ್ಯಾರೇಜ್, ಮೆಕ್ಯಾನಿಕ್ ಶಾಪ್, ಐಸ್‌ಕ್ರೀಮ್ ಪಾರ್ಲರ್, ಮಟನ್ ಶಾಪ್ ಇತ್ಯಾದಿ ಉದ್ದಿಮೆಗಳ ಮೇಲೆ ಬುಧವಾರ ಆಕಸ್ಮಿಕ ದಾಳಿ ನಡೆಸಿ ನಾಲ್ವರು ಬಾಲಕಾರ್ಮಿಕ, ಕಿಶೋರ ಕಾರ್ಮಿಕರನ್ನು ರಕ್ಷಿಸಲಾಗಿದೆ ಎಂದು ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಎ. ಮೌನೇಶ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಹಾಗೂ ಪಾನ್–ಇಂಡಿಯಾ ರೆಸ್ಕ್ಯೂ ಅಂಡ್ ರಿಹಾಬಿಲೇಷನ್ ಕ್ಯಾಂಪೇನ್ ಅಂಗವಾಗಿ ಟಾಸ್ಕ್‌ಫೋರ್ಸ್ ಸಮಿತಿ ರಚಿಸಿ ಜಿಲ್ಲೆಯಾದ್ಯಂತ ಬಾಲ ಕಾರ್ಮಿಕರ ರಕ್ಷಣೆಯಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಬಳ್ಳಾರಿ ತಾಲ್ಲೂಕು ಗ್ರೇಡ್–2 ತಹಶೀಲ್ದಾರ ಮಂಜುನಾಥ ಅವರ ನೇತೃತ್ವದ ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿಯ ಅಧಿಕಾರಿಗಳ ತಂಡದೊಂದಿಗೆ ಸಭೆ ನಡೆಸಿ, ಆಕಸ್ಮಿಕ ದಾಳಿ ಮಾಡಲಾಗಿದ್ದು, ಬಾಲಕಾರ್ಮಿಕ ಮಕ್ಕಳನ್ನು ಕೆಲಸದಿಂದ ಬಿಡುಗಡೆಗೊಳಿಸಲಾಗಿದೆ. ನಂತರ ಮಕ್ಕಳ ಕಲ್ಯಾಣ ಸಮಿತಿಗೆ ಒಪ್ಪಿಸಿ ಸಂಬಂಧಿಸಿ ಶಾಲೆಗಳಲ್ಲಿ ಅವರ ವಯಸ್ಸಿನ ದಾಖಲೆ ಪಡೆದ ನಂತರ ಮಾಲೀಕರ ವಿರುದ್ಧ ಬಾಲಕಾರ್ಮಿಕ ಕಾಯ್ದೆ 1986 ರ ತಿದ್ದುಪಡಿ ಕಾಯ್ದೆ ಅಡಿ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕಾರ್ಮಿಕ ನಿರೀಕ್ಷಕರಾದ ಪರಶುರಾಮ್, ರಮೇಶ್, ಹಿರಿಯ ಕಾರ್ಖಾನೆ ನಿರೀಕ್ಷಕ ವರುಣ್, ಕ್ಷೇತ್ರ ಸಂಪನ್ಮೂಲ ಅಧಿಕಾರಿ ನರಸಪ್ಪ, ಮತ್ತು ಚೈಲ್ಡ್ ಲೈನ್ ಸಿಬ್ಬಂದಿಗಳಾದ ಚಂದ್ರಕಳ, ನಿಲೋಫಿಯಾ, ರಿಚ್ ಸ್ವಯಂಸೇವಾ ಸಂಸ್ಥೆ ಸಿಬ್ಬಂದಿ ಇತರರು ಇದ್ದರು.

# ಗಣಿತ ಕಲಿಕಾ ಆಂದೋಲನ ಜಿಲ್ಲಾ ಮಟ್ಟದ ವಿಚಾರ ಸಂಕಿರಣ




■ ಹಂಪಿ ಟೈಮ್ಸ್ ಬಳ್ಳಾರಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಶಾಲಾ ಶಿಕ್ಷಣ ಇಲಾಖೆ ಮತ್ತು ಅಕ್ಷರ ಫೌಂಡೇಷನ್ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಗುರುವಾರ ಗಣಿತ ಕಲಿಕಾ ಆಂದೋಲನ–ಜಿಲ್ಲಾ ಮಟ್ಟದ ವಿಚಾರ ಸಂಕಿರಣ ನಡೆಯಿತು.

ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ ಅವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಾಲಾ ಮಕ್ಕಳಲ್ಲಿ ಗಣಿತಾ ವಿಷಯದಲ್ಲಿ ಕಲಿಕಾಸಕ್ತಿ ಮೂಡಿಸಲು ವಿಚಾರ ಸಂಕಿರಣಗಳು ಮುಖ್ಯವಾಗಿದ್ದು, ಶಿಕ್ಷಕರು ಸಕ್ರೀಯವಾಗಿ ಪಾಲ್ಗೊಂಡು ವಿಚಾರಗೋಷ್ಠಿ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ಹೇಳಿದರು.

ಅಕ್ಷರ ಫೌಂಡೇಷನ್‌ನ ಕಾರ್ಯಾಚರಣೆ ಮತ್ತು ಸಮುದಾಯ ಅಭಿವೃದ್ಧಿಯ ಮುಖ್ಯಸ್ಥರಾದ ಶಂಕರ್ ನಾರಾಯಣ ಜೆ.ವಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲಾ ಮಟ್ಟದಲ್ಲಿ ಗಣಿತ ವಿಷಯದಲ್ಲಿ ಮಕ್ಕಳಿಗೆ ಗುಣಮಟ್ಟ ತರಬೇತಿ ನೀಡಲು, ಪ್ರೌಢಶಾಲಾ ಮಕ್ಕಳಲ್ಲಿನ ಕಲಿಕೆಯ ಸಾರಾಂಶವನ್ನು ಕಾರ್ಯಗತಗೊಳಿಸಲು ವಿಚಾರ ಸಂಕಿರಣವು ಹಮ್ಮಿಕೊಳ್ಳಲಾಗಿದೆ ಎಂದರು.

ಶಾಲಾ ಶಿಕ್ಷಣ ಇಲಾಖೆಯ ಆಡಳಿತದ ಉಪನಿರ್ದೇಶಕರಾದ ಉಮಾದೇವಿ, ಶಾಲಾ ಶಿಕ್ಷಣ ಇಲಾಖೆಯ ಅಭಿವೃದ್ಧಿಯ ಉಪನಿರ್ದೇಶಕರಾದ ಓ.ಆರ್ ಪ್ರಕಾಶ, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸಿ.ನಿಂಗಪ್ಪ, ಬಳ್ಳಾರಿ ತಾಲ್ಲೂಕಿನ ಯರ್ರಗುಡಿ ಗ್ರಾಮ ಪಂಚಾಯತ್ ಅಧ್ಯಕ್ಷ ಸುರೇಶ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ವಿಚಾರ ಗೋಷ್ಠಿ ನಡೆಸಿಕೊಟ್ಟರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಗ್ರಾಮ ಪಂಚಾಯತಿ ಮಟ್ಟದ ಗಣಿತ ಸ್ಪರ್ಧೆಗಳ ಬಳ್ಳಾರಿ ಜಿಲ್ಲೆ ವರದಿ ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದಲ್ಲಿ ಉತ್ತಮ ಫಲಿತಾಂಶ ಪಡೆದ ಜಿಲ್ಲೆಯಲ್ಲಿನ 25 ಶಾಲೆಗಳು ಮತ್ತು 25 ಗ್ರಾಮ ಪಂಚಾಯತಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲೆಯ ವಿವಿಧ ಗ್ರಾಪಂ ಅಧ್ಯಕ್ಷರು, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ಇತರರು ಉಪಸ್ಥಿತರಿದ್ದರು.

Contact for Advertisements : 94486 33038

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No. 1377/2024**

Between: 1. Smt. Sharadamma wife of Sanna Obaiah D/o late Dodda Sooraiah, aged about 58 years, R/o Soorammanahalli Village in Molakalmuru Taluk Chitradurga district. 2. Somanna @ Yarriswamy son of late Dodda Sooraiah, aged about 56 years, Hindu, agriculturists R/o Jummobanaballi Village Kudligi Taluk Vijayanagara district. 3. Papanna @ Papaiah son of late Dodda Sooraiah, aged about 54 years, Hindu, agriculturists R/o Jummobanaballi Village Kudligi Taluk Vijayanagara district. 4. Smt. Suma wife of Jayanna D/o late Dodda Sooraiah, aged about 52 years, Hindu, agriculturists R/o Soorammanahalli Village in Molakalmuru Taluk Chitradurga district ...Petitioners And

The Tahasildar Kudligi, …. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioner have instituted above petition to get the death certificate of their deceased petitioner Mother by name late Papamma w/o Late Dodda Sooraiah was died on 04.05.1973 at Jummobanahalli Myasarahatti village, in Kudligi Taluk, and Viajayangara District. On the file of the civil Judge & JMFC at Kudligi, The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 22-11-2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte, Given under my hand and seal of this Hon'ble Court on 23-10-2024.

**By Order of the court**
**Chief Ministerial Officer**
**Civil Judge (J.D) Court Kudligi**

**Sri.G.M.Mallikarjunaiah**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No. 1378 /2024**

**Between:** 1. Smt. Sharadamma wife of Sanna Obaiah D/o late Dodda Sooraiah, aged about 58 years, R/o Soorammanahalli Village in Molakalmuru Taluk Chitradurga district., 2. Somanna @ Yarriswamy son of late Dodda Sooraiah, aged about 56 years, Hindu, agriculturists R/o Jummobanaballi Village Kudligi Taluk Vijayanagara district. 3. Papanna @ Papaiah son of late Dodda Sooraiah, aged about 54years,Hindu,agriculturistsR/oJummobanaballi Village Kudligi Taluk Vijayanagara district. 4. Smt. Suma wife of Jayanna D/o late Dodda Sooraiah, aged about 52 years, Hindu, agriculturists R/o Soorammanahalli Village in Molakalmuru Taluk Chitradurga district. … Petitioners And
The Tahasildar Kudligi, …. Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioner have instituted above petition to get the death certificate of their deceased petitioner father by name late Dodda Sooraiah s/o Late Mustalagummi Sooraiah was died on 05/11/1984 at Jummobanahalli Myasara hatti village, in Kudligi Taluk, and Vijayangara District. On the file of the civil Judge & JMFC at Kudligi, The Tahasildar Kudligi is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 22-112024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte, Given under my hand and seal of this Hon'ble Court on 23- 10- 2024.

**By Order of the court**
**Chief Ministerial Officer**
**Civil Judge (J.D) Court Kudligi**

**Sri.G.M.Mallikarjunaiah**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1374/2024**

Between: 1) Smt. Gangamma D/o late Shivalingappa, aged about 55 years,
2) Smt. Nagamma D/o late Shivalingappa, aged about 53 years,
3) G.S.Linganna S/o late Shivalingappa, aged about 50 years,
4) Nagalingappa S/o late Shivalingappa, aged about 48 years, All are Hindu, Agriculturist, R/o Nagalapura village in Kudligi Taluk, Vijayanagara District.
… Petitioner And
The Tahasildar Kudligi … Respondent

**SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Petitioner father Shivalingappa Son of Sanna Lingappa was died on 16/04/2017 on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 22/11/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 24/10/2024.

By Order of the court
**Chief Ministerial Officer**
Civil Judge (J.D) Court Kudligi

**Govinda Reddy, Advocates, Kudligi**
**M: 9740480540**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1379/2024**

Between: 1) Smt. Papamma wife of late E.Sanna Hanumanthappa, aged about 79 years, Hindu, Agriculturist, R/o Nagalapura village in Kudligi Taluk, Vijayanagara District 2) Smt. Gouramma daughter of late E.Sanna Hanumanthappa, aged about 54 years, Hindu, Agriculturist, R/o Nagalapura village in Kudligi Taluk, Vijayanagara District 3) Guruswamy son of late E.Chowdappa, aged about 59 years, Hindu, Agriculturist, R/o Echalabommanahlli village in Kudligi Taluk, Vijayanagara District

E.Rajappa son of Late Erappa, aged about 49 years, Hindu, Agriculturist, R/o Nagalapura village in Kudligi Taluk, Vijayanagara District
… Petitioner And
The Tahasildar Kudligi .....Respondent

**SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Petitioner No.1's husband, Petitioner No.2's father to 3 and 4's father-in-law Smt. Thippeswamy of late E.Siddappa was died on 05/10/1977 on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 22/11/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 24/10/2024.

By Order of the court
**Chief Ministerial Officer**
Civil Judge (J.D) Court Kudligi

**Govinda Reddy, Advocates, Kudligi**
**M: 9740480540**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No. 1375/2024**

Between: 1) Smt. Papamma wife of late E.Sanna Hanumanthappa, aged about 79 years, Hindu, Agriculturist, R/o Nagalapura village in Kudligi Taluk, Vijayanagara District 2) Smt. Gouramma daughter of late E.Sanna Hanumanthappa, aged about 54 years, Hindu, Agriculturist, R/o Nagalapura village in Kudligi Taluk, Vijayanagara District 3).Guruswamy son of late E.Chowdappa, aged about 59 years, Hindu, Agriculturist, R/o Echalabommanahlli village in Kudligi Taluk, Vijayanagara District

E.Rajappa son of Late Erappa, aged about 49 years, Hindu, Agriculturist, R/o Nagalapura village in Kudligi Taluk, Vijayanagara District
....Petitioner And
The Tahasildar Kudligi …Respondent

**SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Petitioner No.1's mother-in-law, Petitioner No.2 to 4's Grandmother Smt. Gouramma wife of late E.Siddappa was died on 23/12/1968 on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 22/11/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 24/10/2024.

By Order of the court
**Chief Ministerial Officer**
Civil Judge (J.D) Court Kudligi

**Govinda Reddy, Advocates, Kudligi**
**M: 9740480540**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1376/2024**

Between: 1)Smt. Papamma wife of late E.Sanna Hanumanthappa, aged about 79 years, Hindu, Agriculturist, R/o Nagalapura village in Kudligi Taluk, Vijayanagara District 2) Smt. Gouramma daughter of late E.Sanna Hanumanthappa, aged about 54 years, Hindu, Agriculturist, R/o Nagalapura village in Kudligi Taluk, Vijayanagara District. 3) Guruswamy son of late E.Chowdappa, aged about 59 years, Hindu, Agriculturist, R/o Echalabommanahlli village in Kudligi Taluk, Vijayanagara District

E.Rajappa son of Late Erappa, aged about 49 years, Hindu, Agriculturist, R/o Nagalapura village in Kudligi Taluk, Vijayanagara District
… Petitioner And
The Tahasildar Kudligi .... Respondent

**SUMMONS TO INRERESTRD PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Petitioner No.1's father-in-law, Petitioner No.2 to 4's Grandfather by name E. Siddappa son of late E.Muniyappa was died on 10/11/1962 at Echalabommanahalli village in Kudligi Taluk, Vijayanagara District on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 22/11/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 08/10/2024.

By Order of the court
**Chief Ministerial Officer**
Civil Judge (J.D) Court Kudligi

**Govinda Reddy, Advocates, Kudligi**
**M: 9740480540**

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಟನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ವಿಜ್ಞಾನ

### ಅಧ್ಯಾಯ 7 : ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ ?

ಮುಂದುವರೆದ ಭಾಗ ........

8. ಸ್ತ್ರೀಯ ಗರ್ಭಾವಧಿಯಲ್ಲಿ ಜರಾಯುವಿನ ರಚನೆ ಮತ್ತು ಪ್ರಮುಖ ಪಾತ್ರವನ್ನು ವಿವರಿಸಿ.

ಉತ್ತರ: ರಚನೆ : • ಇದು ಸ್ತ್ರೀಯ ಗರ್ಭಾಶಯದಲ್ಲಿ ಭ್ರೂಣ ಹಾಗೂ ತಾಯಿಯ ದೇಹಕ್ಕೆ ಸಂಪರ್ಕ ಕಲ್ಪಿಸುತ್ತದೆ.

• ಇದು ತಟ್ಟೆಯಾಕಾರದ ರಚನೆ ಹೊಂದಿದ್ದು , ಗರ್ಭಕೋಶದ ಗೋಡೆಯೊಳಗೆ ಹುದುಗಿಕೊಂಡಿರುತ್ತದೆ.

ಕಾರ್ಯ : • ಇದು ಭ್ರೂಣಕ್ಕೆ ತಾಯಿಯ ದೇಹದಿಂದ ಆಹಾರ & ಆಕ್ಸಿಜನ್ ಒದಗಿಸುತ್ತದೆ.

• ಭ್ರೂಣದಿಂದ ತ್ಯಾಜ್ಯಗಳನ್ನು ಜರಾಯುವಿನ ಮೂಲಕ ಹೊರ ಹಾಕಲಾಗುತ್ತದೆ.

9. ಮನುಷ್ಯರಲ್ಲಿ ಪುರುಷ ಸಂತಾನೋತ್ಪತ್ತಿವ್ಯೂಹದ ಪ್ರತಿಯೊಂದು ರಚನೆಯ ಮಹತ್ವದ ಕಾರ್ಯ ವಿವರಿಸಿ.

ಉತ್ತರ: 1.ವೃಷಣಗಳು : – • ವೀರ್ಯಾಣುಗಳನ್ನು ಉತ್ಪತ್ತಿಮಡುತ್ತವೆ.

• ಟೆಸ್ಟೋಸ್ಟಿರಾನ್ ಹಾರ್ಮೋನ್ ಅನ್ನು ಸ್ರವಿಸುತ್ತವೆ.

2. ವೃಷಣಚೀಲ – ವೀರ್ಯಾಣುಗಳ ಸ್ರವಿಕೆಗೆ ಅಗತ್ಯವಾದ ಉಷ್ಣವನ್ನು ಯಂತ್ರಿಸುತ್ತದೆ.

3. ವೀರ್ಯನಾಳ – ವೃಷಣಗಳಿಂದ ವೀರ್ಯಾಣುಗಳ ಸಾಗಾಣಿಕೆ.

4. ವೀರ್ಯಕೋಶಿಕೆ – • ಇವು ತಮ್ಮ ಸ್ರವಿಕೆಯನ್ನು ವೀರ್ಯನಾಳಕ್ಕೆ ಸೇರಿಸುತ್ತವೆ.

• ಇವುಗಳ ಸ್ರವಿಕೆಯು ವೀರ್ಯಾಣುಗಳ ಚಲನೆಯನ್ನು ಸುಲಭಗೊಳಿಸುತ್ತವೆ.

5. ಪ್ರೊಸ್ಟೇಟ್ ಗ್ರಂಥಿ – ವೀರ್ಯಾಣುಗಳ ಸಾಗಾಣಿಕೆಯನ್ನು ಸುಲಭಗೊಳಿಸುತ್ತದೆ. ವೀರ್ಯಾಣುಗಳಿಗೆ ಪೋಷಣೆಯನ್ನು ಒದಗಿಸುತ್ತದೆ.

6. ಶಿಶ್ನ – ವೀರ್ಯಾಣುಗಳನ್ನು ನಿಶೇಚನ ನಡೆಯುವ ಸ್ಥಳಕ್ಕೆ ತಲುಪಿಸುತ್ತವೆ.

10. ಹೆಣ್ಣು ಸಂತಾನೋತ್ಪತ್ತಿ ವ್ಯೂಹದ ಪ್ರಮುಖ ಭಾಗಗಳು ಮತ್ತು ಅವುಗಳ ಕಾರ್ಯಗಳನ್ನು ವಿವರಿಸಿ.

ಉತ್ತರ: 1.ಅಂಡಾಶಯ – • ಪ್ರತಿ ಅಂಡಾಶಯವು ಪ್ರತಿ ತಿಂಗಳಿಗೆ ಒಂದು ಅಂಡಾಣುವನ್ನು ಉತ್ಪತ್ತಿ ಮಾಡುತ್ತವೆ.

• ಅಂಡಾಶಗಳು ಈಸ್ಟ್ರೋಜನ್ ಮತ್ತು ಪ್ರೋಜೆಸ್ಟಿರಾನ್‌ಗಳಂತಹ ಹಾರ್ಮೋನ್‌ಗಳನ್ನು ಸ್ರವಿಸುತ್ತವೆ.

2.ಅಂಡನಾಳ(ಫೆಲೋಪಿಯನ್ ನಾಳ) – • ಅಂಡಾಣುಗಳನ್ನು ಅಂಡಾಶಯದಿಂದ ಗರ್ಭಾಶಯಕ್ಕೆ ಸಾಗಿಸುತ್ತದೆ.

• ಅಂಡಾಣು ಮತ್ತು ವೀರ್ಯಾಣುಗಳು ಸಂಧಿಸುವ (ನಿಶೇಚನ) ಸ್ಥಳ ಇದಾಗಿದೆ.

3.ಗರ್ಭಾಶಯ – • ಫಲಿತಗೊಂಡ ಅಂಡಾಣು ನೆಲೆಗೊಳ್ಳುವಂತೆ ಮಾಡುತ್ತದೆ.

• ಭ್ರೂಣದ ಬೆಳವಣಿಗೆಗೆ ಸೂಕ್ತ ಅವಕಾಶ ಮತ್ತು ರಕ್ಷಣೆ ಒದಗಿಸುತ್ತದೆ.

11. "ಮನುಷ್ಯರಂತಹ ಸ್ತನಿಗಳಿಗೆ ಸಂಬಂಧಿಸಿದಂತೆ ಲೈಂಗಿಕ ಪರಿಪಕ್ವತೆಯನ್ನು ತಲುಪುವುದು ಒಂದು ಅಗತ್ಯ ಘಟನೆ ಆಗಿದೆ." ಈ ಹೇಳಿಕೆಯನ್ನು ಪುಷ್ಟಿಕರಿಸಿ.

June-2023

ಉತ್ತರ: ಲೈಂಗಿಕ ಪರಿಪಕ್ವತೆ ಅಗತ್ಯ ಏಕೆಂದರೆ, ಪುರುಷರಲ್ಲಿ

• ವೃಷಣಗಳ ಬೆಳವಣಿಗೆಯಿಂದ ವೀರ್ಯಾಣು ಉತ್ಪಾದನೆಗೆ / ಟೆಸ್ಟೋಸ್ಟಿರಾನ್ ಉತ್ಪಾದನೆಗೆ.

• ಸಂತಾನೋತ್ಪತ್ತಿಗೆ ವೃಷಣಗಳ ಬೆಳವಣಿಗೆ.

• ಪುರುಷತ್ವದ ಇತರೆ ದ್ವಿತೀಯಕ ಲೈಂಗಿಕ ಲಕ್ಷಣಗಳನ್ನು ಹೊಂದಲು.

• ಲೈಂಗಿಕ ಕ್ರಿಯೆ ನಡೆಸುವಾಗ ಶಿಶ್ನವು ನಿಮಿರಲು ಮತ್ತು ಸ್ತ್ರೀ ದೇಹದೊಳಕ್ಕೆ ವೀರ್ಯಾಣುವನ್ನು ವರ್ಗಾಯಿಸಲು.

ಸ್ತ್ರೀಯರಲ್ಲಿ,

• ಋತುಚಕ್ರ ಉಂಟಾಗಲು
• ಅಂಡಗಳ ಉತ್ಪಾದನೆ ಮತ್ತು ಬಿಡುಗಡೆಗೆ
• ಗರ್ಭಕೋಶದ ಬೆಳವಣಿಗೆಗೆ
• ಸ್ತ್ರೀ ಸಂಬಂಧಿತ ಹಾರ್ಮೋನ್ ಗಳಾದ ಈಸ್ಟ್ರೋಜನ್ ಉತ್ಪಾದನೆಗೆ
• ಮಗು ಜನನದ ನಂತರ ಸ್ತನ್ಯಪಾನ ಮಾಡಿಸಲು ಸ್ತನಗಳ ಬೆಳವಣಿಗೆಗೆ ಅಗತ್ಯವಾಗಿದೆ

12. ಮಾನವರಲ್ಲಿ ಗರ್ಭನಿರೋಧಕ ವಿಧಾನಗಳನ್ನು ಬಳಸಿ ಗರ್ಭಧಾರಣೆ ಯನ್ನು ಹೇಗೆ ತಡೆಗಟ್ಟಬಹುದು? (Sep-2020)

ಉತ್ತರ: • ಶಿಶ್ನದ ಮೇಲೆ ಕಾಂಡೋಮ್ ಧರಿಸುವುದು ಅಥವಾ ಯೋನಿಯೊಳಗೆ ಚೀಲವನ್ನು ಅಳವಡಿಸಿಕೊಳ್ಳುವುದು.

• ಹಾರ್ಮೋನ್ ಸಮತೋಲನಗೊಳಿಸುವ ಔಷಧಗಳನ್ನು ಮಾತ್ರೆಗಳ ರೂಪದಲ್ಲಿ ತೆಗೆದುಕೊಳ್ಳುವುದು

• ಗರ್ಭನಿರೋಧಕ ಸಾಧನಗಳಾದ ವಂಕಿ ಅಥವಾ ಕಾಪರ್–ಟಿ ಯನ್ನು ಗರ್ಭಧಾರಣೆಯನ್ನು ತಡೆಯಲು ಗರ್ಭಕೋಶದೊಳಗೆ ಅಳವಡಿಸಲಾಗುತ್ತದೆ.

• ಪುರುಷರಲ್ಲಿ ವೀರ್ಯನಾಳಕ್ಕೆ ತಡೆ ಒಡ್ಡಿ ವೀರ್ಯಾಣುಗಳ ಸಾಗಾಣಿಕೆಯನ್ನು ತಡೆಯಲು ವ್ಯಾಸೆಕ್ಟಮಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ.

• ಸ್ತ್ರೀಯರಲ್ಲಿ ಅಂಡನಾಳಕ್ಕೆ ತಡೆ ಒಡ್ಡಿ ಅಂಡಾಣುಗಳ ಸಾಗಾಣಿಕೆಯನ್ನು ತಡೆಯಲು ಟ್ಯೂಬೆಕ್ಟಮಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತದೆ.

13. ಲೈಂಗಿಕ ರೀತಿಯ ಸಂತಾನೋತ್ಪತ್ತಿಯ ಅಗತ್ಯತೆಯನ್ನು ವಿವರಿಸಿ.

ಉತ್ತರ: • ಒಂದು ಸಮುದಾಯದಲ್ಲಿ ಪ್ರಭೇದಗಳ ಉಳಿಯುವಿಕೆಯನ್ನು ಖಚಿತ ಪಡಿಸಿಕೊಳ್ಳಲು ಭಿನ್ನತೆಗಳು ಉಪಯುಕ್ತವಾಗಿರುತ್ತವೆ.

• ಲೈಂಗಿಕ ರೀತಿಯ ಸಂತಾನೋತ್ಪತ್ತಿಯಲ್ಲಿ ಎರಡು ಭಿನ್ನ ಜೀವಿಗಳ ಪಾಲ್ಗೊಳ್ಳುಕೆಯು ಹೆಚ್ಚು ಭಿನ್ನತೆಗಳು ಉಂಟಾಗುತ್ತವೆ.

• ಲೈಂಗಿಕ ರೀತಿಯ ಸಂತಾನೋತ್ಪತ್ತಿಯಲ್ಲಿ ಎರಡು ಭಿನ್ನ ಲಿಂಗಕೋಶಗಳು ಸಂಯೋಜಿಸಿ ಹೊಸ ಜೀವಿ ಉಂಟಾಗುತ್ತದೆ. ಆದ್ದರಿಂದ ಪ್ರತಿ ಲಿಂಗಕೋಶಗಳು ಅರ್ಧದಷ್ಟು ಸಂಖ್ಯೆ ಕ್ರೋಮೋಸೋಮ್‌ಗಳನ್ನು ಹಾಗೂ ಅರ್ಧದಷ್ಟು ಪ್ರಮಾಣದ ಡಿಎನ್‌ಎ ಹೊಂದಿರಬೇಕಾಗುತ್ತದೆ. ಆನುವಂಶೀಯ ಸ್ಥಿರತೆಯನ್ನು ಕಾಪಾಡಲು ಇದು ಅವಶ್ಯಕ.

14. ಕೇಸರ ಇಲ್ಲವೆ ಶಲಾಕಾಗ್ರ ಮಾತ್ರ ಹೊಂದಿರುವ ಸಸ್ಯಗಳಲ್ಲಿ ಸ್ವಕೀಯ ಪರಾಗಸ್ಪರ್ಶ ಸಾಧ್ಯವೇ? ನಿಮ್ಮ ಸಮರ್ಥನೀಯ ಉತ್ತರವನ್ನು ಬರೆಯಿರಿ.

ಉತ್ತರ: ಒಂದು ಹೂ ಸ್ವಕೀಯ ಪರಾಗಸ್ಪರ್ಶ ಹೊಂದಲು,

• ಹೂವಿನ ಕೇಸರ ಮತ್ತು ಶಲಾಕಾಗ್ರ ಎರಡೂ ಅವಶ್ಯಕ.

• ಹೂವು ದ್ವಿಲಿಂಗಿಯಾಗಿರಬೇಕು.

15. ಡಿ.ಎನ್.ಎ ಸ್ವಪ್ರತೀಕರಣ ಎಂದರೇನು ? ಸಂತಾನೋತ್ಪತ್ತಿ ಪ್ರಕ್ರಿಯೆಯಲ್ಲಿ ಡಿ.ಎನ್.ಎ ಸ್ವಪ್ರತೀಕರಣವು ಹೆಚ್ಚು ಅತ್ಯಗತ್ಯ ಹಾಗೂ ಮಹತ್ವದಿಂದ ಕೂಡಿದೆ. ಏಕೆ?

ಉತ್ತರ: ಕೋಶವಿಭಜನೆಯ ಸಮಯದಲ್ಲಿ ಡಿ.ಎನ್.ಎ ಅಣು ತನ್ನನ್ನು ತಾನೇ ನಕಲುಗೊಳಿಸಿಕೊಂಡು ಎರಡು ಪ್ರತಿರೂಪಗಳಾಗುವ ಪ್ರಕ್ರಿಯೆಗೆ ಡಿ.ಎನ್.ಎ ಸ್ವಪ್ರತೀಕರಣ ಎನ್ನುವರು.

ಡಿ.ಎನ್.ಎ ಸ್ವಪ್ರತೀಕರಣದ ಅಗತ್ಯ ಹಾಗೂ ಮಹತ್ವ :

• ಡಿ.ಎನ್.ಎ ಸ್ವಪ್ರತೀಕರಣದಿಂದಾಗಿ, ಜೀವಿಗಳು ಆನುವಂಶೀಯ ಸ್ಥಿರತೆಯನ್ನು ಹೊಂದುತ್ತವೆ.

• ಪೋಷಕ ಜೀವಿಗಳಲ್ಲಿನ ಲಕ್ಷಣಗಳು ಮರಿಜೀವಿಗಳಲ್ಲಿ ಕಾಣಲು ಸಾಧ್ಯವಾಗಿದೆ.

• ಡಿ.ಎನ್.ಎ ಸ್ವಪ್ರತೀಕರಣದಿಂದ ಕೋಶವಿಭಜನೆಯ ಸಂದರ್ಭದಲ್ಲಿ ತಾಯಿ ಜೀವಕೋಶದಲ್ಲಿನ ವರ್ಣತಂತುಗಳ ಸಂಖ್ಯೆಯಷ್ಟೇ ಮರಿ ಜೀವಕೋಶಗಳಲ್ಲೂ ಕಾಣಬಹುದು.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

# ಪ್ರಯಾಣಿಕರ ಸುರಕ್ಷತೆ ಮರೆತ ಸಾರಿಗೆ ಇಲಾಖೆ!

**ಪ್ರಯಾಣಿಕರ ಸಂಖ್ಯೆಗನುಗುಣವಾಗಿ ಬಸ್‌ಗಳಿಲ್ಲದ್ದರಿಂದ ಇದ್ದ ಬಸ್ಸಲ್ಲೇ ನೂಕುನುಗ್ಗಲು | ವಯೋವೃದ್ಧರ ಪಾಡು ಹೇಳತೀರದು**

**ಶಾಲೆಗೋದ ಮಕ್ಕಳು ಮನೆಗೆ ಬರುವವರೆಗೆ ಪಾಲಕರಲ್ಲಿ ತಪ್ಪದ ಆತಂಕ | ಸರ್ಕಾರಿ ಬಸ್ಸಲ್ಲಿ ಪಾಲನೆಯಾಗದ ಸಾರಿಗೆ ನಿಯಮಗಳು**








■ **ಬಂದಾತರ ಪ್ರಕಾಶ ಕೊಟ್ಟೂರು.**

ತಾಲೂಕಿನ ವಿವಿಧ ಹಳ್ಳಿಗಳಿಂದ ಕೊಟ್ಟೂರಿನ ಶಾಲಾ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ನಿತ್ಯ ಮನೆಗೆ ತೆರಳಲು ಸಾರಿಗೆ ಬಸ್‌ಗಳ ಕೊರತೆಯಿಂದ, ಸಿಕ್ಕಬಸ್ಸಲ್ಲೇ ಅಪಾಯವನ್ನೂ ಲೆಕ್ಕಿಸದೇ ಜೋತುಬಿದ್ದು, ಸಾಗುತ್ತಿರುವುದು ಪಾಲಕರು ಹಾಗೂ ಪ್ರಜ್ಞಾವಂತರಲ್ಲಿ ಆತಂಕ ಹೆಚ್ಚಿಸಿದೆ.

ಕೊಟ್ಟೂರು ಪಟ್ಟಣದಿಂದ ಹಳ್ಳಿಗಳಿಗೆ ತೆರಳುವ ಸರ್ಕಾರಿ ಬಸ್‌ಗಳ ಬಾಗಿಲಲ್ಲಿ ನಿತ್ಯ ಸಂಜೆ ಜೋತು ಬಿದ್ದು ಸಾಗುವ ವಿದ್ಯಾರ್ಥಿಗಳಿಗೆ ಕಾನೂನಿನ ಅರಿವೂ ಇಲ್ಲದಂತಾಗಿದ್ದು, ಸುರಕ್ಷತೆ ಕ್ರಮಕೈಗೊಳ್ಳಬೇಕಾದ ಸಂಬಂಧ ಪಟ್ಟ ಇಲಾಖೆ ನಿರ್ಲಕ್ಷ್ಯತೆಗೆ ಇದು ಹಿಡಿದ ಕೈಗನ್ನಡಿಯಾಗಿದೆ.

ಕೊಟ್ಟೂರು ಪಟ್ಟಣ ಶೈಕ್ಷಣಿಕ ಕೇಂದ್ರ ಈ ನಿಮಿತ್ತ ನಿತ್ಯ ತಾಲೂಕಿನ ಸುತ್ತಮುತ್ತಲಿನ ಹಳ್ಳಿಗಳಿಂದ ಸಾವಿರಾರು ವಿದ್ಯಾರ್ಥಿಗಳು ಶಿಕ್ಷಣಕ್ಕೆಂದು ನಿತ್ಯ ಆಗಮಿಸುವರು. ಸಂಜೆ ಊರಿಗೆ ಹಿಂದಿರುಗುವಾಗ ನೋಡುಗರನ್ನು ಭಯ ಬೀಳಿಸುವಷ್ಟು ಬಸ್ ಬಾಗಿಲಲ್ಲಿ ವಿದ್ಯಾರ್ಥಿಗಳು ಜೋತು ಬಿದ್ದಿರುತ್ತಾರೆ.

ಸ್ತ್ರೀ ಶಕ್ತಿ ಯೋಜನೆ ಮಹತ್ವಕ್ಕಿಂತ ಹಳ್ಳಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಸ್ ವ್ಯವಸ್ಥೆಯನ್ನು ಸಾರಿಗೆ ಇಲಾಖೆ ಅಧಿಕಾರಿಗಳು ಕಲ್ಪಿಸಬೇಕು. ಬಸ್‌ಗಳ ಕೊರತೆಯಿಂದ ಇಲ್ಲಿ ನಿತ್ಯ ಬಸ್ ಬಾಗಿಲಲ್ಲಿ ಜೋತು ಬಿದ್ದು ಸಾಗುವ ಪರಿಸ್ಥಿತಿ ವಿದ್ಯಾರ್ಥಿಗಳಿಗೆ ಎದುರಾಗಿದೆ. ಸಕಾಲದೊಳಗೆ ಮನೆ ತಲುಪುವ ಅವಸರದಲ್ಲಿ ಸ್ವಲ್ಪ ಮೈಮರೆತರು ಪೋಷಕರ ಪಾಲಿಗೆ ಮಕ್ಕಳು ಇಲ್ಲದಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇಂದು ಆರತಿಗೊಂದು, ಕೀರ್ತಿಗೊಂದು ಎಂಬಂತೆ ಮನೆಗೆ ಒಬ್ಬ, ಒಬ್ಬರೇ ಮಕ್ಕಳಿದ್ದಾರೆ. ಇಂತಹ ವ್ಯವಸ್ಥೆಯಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಮಕ್ಕಳಿಗೆ ಜಾಗೃತಿ ಮೂಡಿಸುವುದರ ಜೊತೆ ಸಮರ್ಪಕ ಸೌಲಭ್ಯ ಒದಗಿಸಿ, ಕಾನೂನು ತಿಳುವಳಿಕೆ ನೀಡಬೇಕಿದೆ ಎನ್ನುವುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯವಾಗಿದೆ.

> **ಕುಟುಂಬಕ್ಕೆ ಮಕ್ಕಳೇ ಆಧಾರ. ಅಧಿಕಾರಿಗಳು ಮಕ್ಕಳಿಗೆ ಕಾನೂನಿನ ತಿಳುವಳಿಕೆಯೊಂದಿಗೆ ಜಾಗೃತಿ ಮಾಡಿಸಬೇಕು, ಈ ಬಗ್ಗೆ ಪೋಷಕರು ಜಾಗೃತಿ ವಹಿಸಬೇಕು, ಇದಕ್ಕೂ ಮೀರಿ ವರ್ತಿಸಿದರೆ ನಿಯಮ ಉಲ್ಲಂಘಿಸುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು.**
>
> **– ಪ್ರಜ್ಞಾವಂತ ನಾಗರಿಕರು,ಕೊಟ್ಟೂರು.**

> **ಹಳ್ಳಿಗಳಿಗೆ ತೆರಳುವ ಬಹುತೇಕ ವಿದ್ಯಾರ್ಥಿಗಳು ಬಸ್ ಒಳಗೆ ಜಾಗ ಇದ್ದರು ಮುಂದಕ್ಕೆ ಹೋಗಲ್ಲ. ಇನ್ನೂ ಕೆಲ ವಿದ್ಯಾರ್ಥಿಗಳಿಗೆ ಬಾಗಿಲಲ್ಲಿ ಜೋತು ಬೀಳುವುದು ಶೋಕಿಯಾಗಿ ಬಿಟ್ಟಿದೆ. ನಮ್ಮ ಮಾತಿಗೆ ಕಿಮ್ಮತ್ತಿಲ್ಲದಾಗಿದೆ. ಈ ಹಿನ್ನೆಲೆ ಕೆಲ ಡ್ರೈವರ್, ಕಂಡಕ್ಟರ್ ಹಳ್ಳಿಗಳಿಗೆ ಹೋಗಲು ಹಿಂದೇಟು ಹಾಕುತ್ತಾರೆ.**
>
> **ಬಸ್ ಕಂಡಕ್ಟರ್.ಕೊಟ್ಟೂರು**

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಕಾರ್ತಿಕ । ಸಂವತ್ಸರ: ಕ್ರೋಧಿ

**22–11–2024 – ಶುಕ್ರವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಆಶ್ಲೇಷ |
| ಯೋಗ | : ಬ್ರಹ್ಮ |
| ಕರಣ | : ಭವ |
| ಸೂರ್ಯೋದಯ | : 06:46:38 |
| ಸೂರ್ಯಾಸ್ತ | : 17:39:30 |
| ರಾಹು ಕಾಲ | : 10:51–12:13 |
| ಯಮಘಂಡ ಕಾಲ | : 14:56–16:18 |
| ಗುಳಿಕ ಕಾಲ | : 08:08–09:30 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 21–11–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1630.67 ಅಡಿ |
| ಒಳ ಹರಿವು | 3469 ಕ್ಯುಸೆಕ್ |
| ಹೊರ ಹರಿವು | 6706 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 96.610ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1598.94 ಅಡಿ |
| ಒಳ ಹರಿವು | 298 ಕ್ಯುಸೆಕ್ |
| ಹೊರ ಹರಿವು | 9642 ಕ್ಯುಸೆಕ್ |
| ಸಾಮರ್ಥ್ಯ | 20.186 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ಸಾರ್ವಜನಿಕ ಗ್ರಂಥಾಲಯ ಇಲಾಖೆ; ಪುಸ್ತಕ ಆಯ್ಕೆಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿ ವತಿಯಿಂದ ಪುಸ್ತಕ ಆಯ್ಕೆಗಾಗಿ 2024ನೇ ಸಾಲಿನಲ್ಲಿ ಪ್ರಥಮ ಮುದ್ರಣವಾಗಿ ಪ್ರಕಟಣೆಗೊಂಡ ಯಾವುದೇ ಭಾಷೆಯ ಪುಸ್ತಕಗಳ ಆಯ್ಕೆಗಾಗಿ ಅರ್ಹ ಆಸಕ್ತ ಲೇಖಕರು, ಲೇಖಕ–ಪ್ರಕಾಶಕರು ಮತ್ತು ಪ್ರಕಾಶಕರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬಳ್ಳಾರಿಯ ನಗರ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿ ಅವರು ತಿಳಿಸಿದ್ದಾರೆ.

ಆಸಕ್ತರು ಪುಸ್ತಕಗಳನ್ನು ಬೆಂಗಳೂರಿನ ಕಬ್ಬನ್ ಉದ್ಯಾನವನ ಬಳಿಯ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ 2025 ರ ಜನವರಿ 1, ಸಂಜೆ 5.30 ರೊಳಗಾಗಿ ನೋಂದಣಿ ಮಾಡಿಸಬೇಕು. ಆ ಪುಸ್ತಕಗಳನ್ನು ಮಾತ್ರ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಪರಿಗಣಿಸಲಾಗುವುದು. ಅಂತಿಮ ದಿನಾಂಕದ ನಂತರ ನೋಂದಣಿಯಾಗುವ ಪುಸ್ತಕಗಳನ್ನುಆಯ್ಕೆಗೆಪರಿಗಣಿಸಲಾಗುವುದಿಲ್ಲ.

ಹೊರ ರಾಜ್ಯಗಳಲ್ಲಿ 2024 ರಲ್ಲಿ ಪ್ರಥಮ ಮುದ್ರಣಗೊಂಡು ಪ್ರಕಟವಾಗುವ ಯಾವುದೇ ಭಾಷೆಯ ಪುಸ್ತಕಗಳನ್ನು ಆಹ್ವಾನಿಸಿದೆ. ಆಯಾ ರಾಜ್ಯ ಕೇಂದ್ರ ಗ್ರಂಥಾಲಯಗಳಲ್ಲಿ ಕೇಂದ್ರ, ಆಯಾ ರಾಜ್ಯ ಸರ್ಕಾರಗಳಿಂದ ಅಧಿಸೂಚಿಸಲ್ಪಟ್ಟ ಅಧಿಕೃತ ಪುಸ್ತಕ ನೋಂದಣಿ ಕೇಂದ್ರಗಳಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು. ನೋಂದಣಿ ಪ್ರಮಾಣ ಪತ್ರದ ನಕಲು ಪತ್ರದ ಪ್ರತಿಯೊಂದಿಗೆ ಮತ್ತು ಆ ಪುಸ್ತಕದ ಆಯ್ಕೆಗಾಗಿ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಒಂದು ಪ್ರತಿಯನ್ನು 2025ರ ಜನವರಿ 2, ಸಂಜೆ 5.30 ಒಳಗಾಗಿ ಸಲ್ಲಿಸಬೇಕು. ತಡವಾಗಿ ಸಲ್ಲಿಸುವ ಪುಸ್ತಕಗಳನ್ನು ಸ್ವೀಕರಿಸಲಾಗುವುದಿಲ್ಲ. ಮರು ಮುದ್ರಣಗೊಳ್ಳುವ ಪುಸ್ತಕಗಳ ಕುರಿತು, ನೋಂದಣಿ ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ಇಲಾಖಾ ಅಂತರ್ಜಾಲ www.dpl.karnataka.gov.in ವೆಬ್‌ಸೈಟ್ ಅಥವಾ ದೂ:080–22864990, 22867358 ಗೆ ಸಂಪರ್ಕಿಸಬಹುದು.

# ನಿತ್ಯ ಓದಿದರೆ ಪರೀಕ್ಷಾ ಭಯ ಇರದು

**ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಟಿ.ರಾಘವೇಂದ್ರ ಹೇಳಿಕೆ | ವಿದ್ಯಾರ್ಥಿಗಳೊಂದಿಗೆ ಸಂವಾದ**



■ **ಹಂಪಿ ಟೈಮ್ಸ್ ಹರಪನಹಳ್ಳಿ**

ಪರೀಕ್ಷಾ ಭಯ ನಿವಾರಣೆಗಾಗಿ ಸತತ ಅಭ್ಯಾಸ, ಪುನರಾವರ್ತನೆ ಮಾಡುವುದರಿಂದ ವಾರ್ಷಿಕ ಪರೀಕ್ಷೆಯನ್ನು ಬರೆಯಲು ಆತ್ಮಸ್ಥೈರ್ಯ ಬರುತ್ತದೆ ಎಂದು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೆಂಗಳೂರು ನಿರ್ದೇಶಕ ಟಿ.ರಾಘವೇಂದ್ರ ಕೆ.ಎ.ಎಸ್ ಹೇಳಿದರು.

ತಾಲೂಕಿನ ಅನಂತನಹಳ್ಳಿ ಸಮೀಪದ ಸರಕಾರಿ ಆದರ್ಶ ವಿದ್ಯಾಲಯ ಅನಂತನಹಳ್ಳಿ ಶಾಲೆಗೆ ಗುರುವಾರ ಹರಪನಹಳ್ಳಿ ತಾಲೂಕಿನ ನೋಡಲ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತನಾಡಿದರು.

ಎಸ್.ಎಸ್.ಎಲ್.ಸಿ ನಂತರ ಯಾವ ವಿಭಾಗಗಳನ್ನು ಮತ್ತು ಯಾವ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಸ್ಪಷ್ಟ ನಿರ್ಧಾರವನ್ನು ಮಾಡಬೇಕು. ಈ ಹಂತದಿಂದಲೇ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡು ಅಧ್ಯಯನ ಮಾಡಿದ್ದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಬಹುದು. ಮತ್ತು ಪರೀಕ್ಷಾ ಸಮಯದಲ್ಲಿ ವಿಚಲಿತರಾಗದೆ ಅನ್ಯ ಆಕರ್ಷಣೆಗಳಿಗೆ ಒಳಗಾಗದೆ ಅಭ್ಯಾಸ ಮಾಡುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು. ನಂತರ ಮಕ್ಕಳು ಕೇಳಿದ ಹಲವಾರು ಪ್ರಶ್ನೆಗಳಿಗೆ ಉತ್ತರಿಸಿದರು.

ಸಂವಾದದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಸಿದ್ದನಗೌಡ ಅಧ್ಯಕ್ಷತೆವಹಿಸಿದ್ದರು. ಮುಖ್ಯ ಶಿಕ್ಷಕ ಚಂದ್ರಪ್ಪ.ಎಚ್.ಕೆ ಪ್ರಸ್ತಾವಿಕವಾಗಿ ಮಾತನಾಡಿದರು.

ಎಸ್.ಡಿ.ಎಂ.ಸಿ ಉಪಾಧ್ಯಕ್ಷರಾದ ಶಾರದಮ್ಮ, ಸದಸ್ಯರಾದ ಶೀಲಾ ನಾಯಕ್, ಬಸವನಗೌಡ, ನೇತ್ರಾವತಿ, ಕವಿತಾ, ರಾಧಾ, ಸನಾವುಲ್ಲ, ಪುಷ್ಪಾ ಎಸ್.ಎಂ, ಕಿರಣ್ ಮೋಹನ್, ರೇವಣಸಿದ್ದಪ್ಪ, ಗೋಣಪ್ಪ ಸೇರಿದಂತೆ ಶಾಲೆಯ ಎಲ್ಲಾ ಶಿಕ್ಷಕ, ಸಿಬ್ಬಂದಿಯವರು ಹಾಜರಿದ್ದರು.



ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE
Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)
Display Advertisements
Examples: Brand promotions, Product launches, Corporate announcements
Public Notices and Announcements
Examples: Tender notices, Government announcements, Legal notices, Obituaries
Recruitment Advertisements
Examples: Company job openings, Walk-in interviews, Recruitment drives
Health and Wellness Advertisements
Examples: Hospitals or clinics, Medical equipment, Health supplements
Educational Advertisements
Examples: College admissions, Coaching center promotions, Training programs
Event Advertisements
Examples: Cultural programs, Exhibitions, Concerts or festivals
Retail Advertisements
Examples: Sales or discounts, New store openings
Entertainment Advertisements
Examples: Movie releases, TV show promotions, Theater events
Political Advertisements
Campaigns or announcements related to political parties or candidates.
Real Estate Advertisements
Ads for buying, selling, or renting property.
Matrimonial Advertisements
Personal ads for seeking marriage alliances. Examples: Bride or groom profiles, Community-specific ads
Product Advertisements
Examples: Electronics, Automobiles, FMCG products
contact for more information
M: 94 48 63 30 38
Email:- hampitimes@gmail.com

**ಸಂಡೂರು ವಿಧಾನಸಭೆ ಉಪಚುನಾವಣೆ–2024**

# ಮತ ಎಣಿಕೆಗೆ ಸಕಲ ಸಿದ್ಧತೆ : ರಾಜೇಶ್



■ **ಹಂಪಿ ಟೈಮ್ಸ್ ಬಳ್ಳಾರಿ**

ಸಂಡೂರು ವಿಧಾನಸಭೆ ಉಪಚುನಾವಣೆಯು ಸುಸೂತ್ರವಾಗಿ ನಡೆದಿದ್ದು, ಶೇ.76.02 ರಷ್ಟು ಮತದಾನವಾಗಿದೆ. ಮತ ಎಣಿಕೆ ಕಾರ್ಯವು ನ.23 ರಂದು ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ನಡೆಯಲಿದ್ದು, ಕೇಂದ್ರ ಚುನಾವಣಾ ಆಯೋಗದ ಮಾರ್ಗದರ್ಶನದಂತೆ ಎಲ್ಲಾ ರೀತಿಯ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದುಸಂಡೂರುವಿಧಾನಸಭೆಉಪಚುನಾವಣೆಯ ಚುನಾವಣಾಧಿಕಾರಿ ಹಾಗೂ ಸಹಾಯಕ ಆಯುಕ್ತರಾದ ರಾಜೇಶ್ ಹೆಚ್.ಡಿ ಅವರು ಹೇಳಿದರು.

ಸಂಡೂರು ವಿಧಾನಸಭೆ ಉಪಚುನಾವಣೆಯ ಮತ ಎಣಿಕೆ ಕಾರ್ಯ ಕುರಿತಂತೆ ಗುರುವಾರ ಸಹಾಯಕ ಆಯುಕ್ತರ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು. ನ.23 ರಂದು ಬೆಳಿಗ್ಗೆ 08 ಗಂಟೆಯಿಂದ ಮತಗಳ ಎಣಿಕೆ ಕಾರ್ಯ ಪ್ರಾರಂಭವಾಗಲಿದೆ. ಇದಕ್ಕೂ ಮುನ್ನ 07 ಗಂಟೆಗೆ ಭದ್ರತಾ ಕೊಠಡಿ ತೆರೆಯಲಾಗುವುದು. ಮತ ಎಣಿಕೆ ಕೇಂದ್ರದಲ್ಲಿ 253 ಮತಗಟ್ಟೆಗಳ ಮತಯಂತ್ರಗಳು, 13 ಅಂಚೆ ಮತಗಳ ಎಣಿಕೆ ಮತ್ತು ಇಟಿಪಿಬಿಎಸ್–04 ಮತ ಎಣಿಕೆ ಕಾರ್ಯ ನಡೆಯಲಿದೆ ಎಂದು ತಿಳಿಸಿದರು.

ಮತ ಎಣಿಕೆ ಕಾರ್ಯವನ್ನು ಸುಗಮವಾಗಿ ಕೈಗೊಳ್ಳಲು 14+1 ಟೇಬಲ್‌ಗಳ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಟೇಬಲ್‌ಗೆ ಒಬ್ಬರು ಎಣಿಕಾ ಮೇಲ್ವಿಚಾರಕರು, ಒಬ್ಬರು ಎಣಿಕಾ ಸಹಾಯಕರು, ಒಬ್ಬರು ಮೈಕ್ರೋ ಅಬ್ಸರ್ವರ್‌ಗಳನ್ನು ನಿಯೋಜಿಸಲಾಗಿದೆ ಎಂದು ಅವರು ತಿಳಿಸಿದರು.

ಸಂಡೂರು ವಿಧಾನಸಭೆ ಉಪಚುನಾವಣೆಯ ಮತ ಎಣಿಕಾ ಕಾರ್ಯಕ್ಕೆ 19 ಎಣಿಕಾ ಮೇಲ್ವಿಚಾರಕರು, 21 ಎಣಿಕಾ ಸಹಾಯಕರು ಮತ್ತು 20 ಎಣಿಕಾ ಮೈಕ್ರೋ ಅಬ್ಸರ್ವರ್‌ಗಳನ್ನು ನೇಮಕ ಮಾಡಲಾಗಿದೆ. ಮತ ಎಣಿಕೆ ಅಧಿಕಾರಿಗಳು, ಸಹಾಯಕರಿಗೆ ಈಗಾಗಲೇ ತರಬೇತಿ ನೀಡಲಾಗಿದೆ ಎಂದರು.

ಸಂಡೂರು ವಿಧಾನಸಭೆ ಕ್ಷೇತ್ರದಲ್ಲಿ ಒಟ್ಟು 253 ಮತಗಟ್ಟೆಗಳಿದ್ದು, ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ 19 ಸುತ್ತು ಮತ ಎಣಿಕೆ ನಡೆಯಲಿದೆ. ನಗರದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಮತ ಎಣಿಕೆಗೆ ಸಕಲ ವ್ಯವಸ್ಥೆ ಕೈಗೊಳ್ಳಲಾಗಿದೆ. ಪ್ರತಿ ಹಂತದ ಮತ ಎಣಿಕೆ ವಿವರವನ್ನು ಮಾಧ್ಯಮಗಳ ಮೂಲಕ ಪ್ರಚುರಪಡಿಸಲು ಅನುವಾಗುವಂತೆ ಮಾಧ್ಯಮದವರಿಗೆ ಮತ ಎಣಿಕೆ ಕೇಂದ್ರದಲ್ಲಿ ಮಾಧ್ಯಮ ಕೇಂದ್ರವನ್ನು ತೆರೆಯಲಾಗುವುದು ಎಂದರು.

ಮತ ಎಣಿಕೆ ಕೇಂದ್ರ ಸುತ್ತಲೂ 100 ಮೀಟರ್ ಪ್ರದೇಶ ಆವರಣದಲ್ಲಿ ವಾಹನಗಳ ಪ್ರವೇಶವಿರುವುದಿಲ್ಲ. ಮತ ಎಣಿಕೆ ಅಂಗವಾಗಿ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ ಎಂದು ಹೇಳಿದರು.

**ಪೊಲೀಸ್ ಅಧಿಕಾರಿ, ಸಿಬ್ಬಂದಿ ನಿಯೋಜನೆ:**

ಮತ ಎಣಿಕೆ ಕೇಂದ್ರವಾದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಸುತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜನೆ ಮಾಡಲಾಗಿದೆ. ಅದರಲ್ಲಿ ಸಿಆರ್‌ಪಿಎಫ್, ಸಿಎಎಸ್‌ಎಫ್, ಕೆಎಸ್‌ಆರ್‌ಪಿ ಮತ್ತು ಸಿವಿಲ್ ಪೊಲೀಸ್ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ ಎಂದು ರಾಜೇಶ್.ಹೆಚ್.ಡಿ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯ ಸಿಬ್ಬಂದಿಗಳು ಹಾಗೂ ಇತರರು ಉಪಸ್ಥಿತರಿದ್ದರು.

